# ಕನ್ನಡ ಪೋಸ್ಟ್

ಇದು ಸುದ್ದಿ ವಿಳಾಸ

ಸಂಪಾದಕ : ಮಂಜು ಬನವಾಸೆ

KANNADA POST

ಕನ್ನಡ ದಿನ ಪತ್ರಿಕೆ Kannada Daily

ಹಾಸನ E-mail : kannadapostnews@gmail.com / ಕನ್ನಡ post Price: ₹1

Vol.No.01 | Issue. 208 | Pages. 2 | Date: 27-06-2025, FRIDAY RNI NO: KARKAN/2024/89601

ಸಂಪುಟ : 01 - ಸಂಚಿಕೆ : 208 - ಪುಟಗಳು : 2 - 27 ಜೂನ್ 2025 ಶುಕ್ರವಾರ Ph: 8762954248 ದರ : ₹1



# ಇನ್ಮುಂದೆ ಪ್ರತಿ ಗುರುವಾರ ವಿಪತ್ತು ನಿರ್ವಹಣಾ ಸಭೆ

## ಕರ್ತವ್ಯ ಲೋಪ ಕಂಡುಬಂದರೆ ಕ್ರಮ | ಜಿಲ್ಲಾಧಿಕಾರಿ ಖಡಕ್ ಎಚ್ಚರಿಕೆ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಪ್ರತಿ ಗುರುವಾರ ಬೆಳಿಗ್ಗೆ 11 ಗಂಟೆಗೆ ಜಿಲ್ಲಾ ವಿಪತ್ತು ನಿರ್ವಹಣಾ ಸಭೆ ನಡೆಸಲಾಗುವುದು. ವಿಪತ್ತು ಸಂದರ್ಭದಲ್ಲಿ ಜನರಿಗೆ ನೆರವಾಗುವುದು ನಮ್ಮ ಆದ್ಯತೆಯಾಗಿದ್ದು ಕರ್ತವ್ಯ ಲೋಪ ಕಂಡುಬಂದರೆ ಅಂತವರ ವಿರುದ್ಧ ಕ್ರಮ ಜರುಗಿಸಲಾಗುವುದು ಎಂದು ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ ಎಚ್ಚರಿಕೆ ನೀಡಿದರು.

ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಗುರುವಾರ ವಿಡಿಯೊ ಸಂವಾದದ ಮೂಲಕ ತಾಲ್ಲೂಕು ಮಟ್ಟದ ಅಧಿಕಾರಿಗಳೊಂದಿಗೆ ಜಿಲ್ಲಾ ವಿಪತ್ತು ನಿರ್ವಹಣಾ ಸಮಿತಿ ಸಭೆಯಲ್ಲಿ ಮಾತನಾಡಿ, ಸಾರ್ವಜನಿಕರಿಗೆ ತೊಂದರೆಯಾಗದಂತೆ ನೋಡಿಕೊಳ್ಳುವುದು ನಮ್ಮ ಕರ್ತವ್ಯ. ಯಾವ ಅನಾಹುತ ಸಂಭವಿಸದಂತೆ ತಡೆಯುವುದು ಬಹುಮುಖ್ಯ. ಮಳೆಗಾಲದಲ್ಲಿ ಸಂಭವಿಸಬಹುದಾದ ವಿಪತ್ತುಗಳನ್ನು ಎಚ್ಚರಿಕೆಯಿಂದ ನಿರ್ವಹಿಸಬೇಕು. ಉಪ ವಿಭಾಗಾಧಿಕಾರಿ ಹಾಗೂ ತಹಶೀಲ್ದಾರ್‌ಗಳು ನಿಗಾವಹಿಸಿ ಪ್ರತಿದಿನದ ಮಾಹಿತಿ ನೀಡಬೇಕು ಎಂದರು.




### ಕಾಳಜಿ ಕೇಂದ್ರ ತೆರೆಯಿರಿ

ಮಳೆಯಿಂದ ಮನೆ, ಕೊಟ್ಟಿಗೆ, ಜಾನುವಾರುಗಳಿಗೆ ಹಾನಿಯಾದಾಗ ತಕ್ಷಣ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿ, ಶೀಘ್ರ ಪರಿಹಾರ ಒದಗಿಸಬೇಕು. ಸಮಯೋಚಿತ ಕೆಲಸದ ಮೂಲಕ ಸಾರ್ವಜನಿಕರಿಗೆ ನೆರವಾಗಬೇಕು. ತಹಶೀಲ್ದಾರ್‌ಗಳು ತಮ್ಮ ವ್ಯಾಪ್ತಿಯಲ್ಲಿ ಕಾಳಜಿ ಕೇಂದ್ರ ತೆರೆದು ಅವುಗಳ ಬಗ್ಗೆ ವ್ಯಾಪಕ ಪ್ರಚಾರ ನೀಡಬೇಕು. ಮಳೆಯಿಂದ ಮನೆ ಕುಸಿದು ಅಥವಾ ಯಾವುದಾದರೂ ತೊಂದರೆಯಲ್ಲಿ ಸಿಲುಕಿದ ಸಾರ್ವಜನಿಕರನ್ನು ಸುರಕ್ಷಿತವಾಗಿ ಸ್ಥಳಾಂತರ ಮಾಡಿ ಸೂಕ್ತ ವ್ಯವಸ್ಥೆ ಕಲ್ಪಿಸಲು ಕ್ರಮ ಕೈಗೊಳ್ಳುವಂತೆ ಸೂಚಿಸಿದರು.

ತಾಲ್ಲೂಕು ಕೇಂದ್ರಗಳಲ್ಲಿ ಕಂಟ್ರೋಲ್ ರೂಂ ತೆರೆದು, ಕ್ರಿಯಾಶೀಲವಾಗಿರುವಂತೆ ನೋಡಿಕೊಳ್ಳಬೇಕು. ಸಾರ್ವಜನಿಕರಿಂದ ಬರುವ ಕರೆಗಳನ್ನು ತಕ್ಷಣ ಸ್ವೀಕರಿಸಿ ಅಗತ್ಯ ಕ್ರಮ ವಹಿಸಬೇಕು. ಸಾರ್ವಜನಿಕರ ಸುರಕ್ಷತೆ, ಭದ್ರತೆ ಹಾಗು ಸಹಾಯ ನೀಡಲು ನಿಗಾವಹಿಸಿ ಎಂದು ತಿಳಿಸಿದರು.

> ರಸ್ತೆ ಬದಿಯಲ್ಲಿರುವ ಸರ್ಕಾರಿ ಜಾಗ ಅಥವಾ ಖಾಸಗಿ ಜಾಗದಲ್ಲಿ ಮರಗಳು ಬೀಳುವ ಹಂತದಲ್ಲಿದ್ದರೆ ಅವುಗಳನ್ನು ಗುರುತಿಸಿ ತೆರವುಗೊಳಿಸಲು ಅರಣ್ಯ ಇಲಾಖೆಯೊಂದಿಗೆ ಸ್ಥಳೀಯ ಸಂಸ್ಥೆ ಹಾಗೂ ಸೆಸ್ಕ್ ಸಮನ್ವಯತೆಯಿಂದ ಕೆಲಸ ಮಾಡಬೇಕು.
>
> - ಕೆ.ಎಸ್. ಲತಾಕುಮಾರಿ, ಜಿಲ್ಲಾಧಿಕಾರಿ

### 12 ಕಡೆ ಗುಡ್ಡ ಕುಸಿತ ಸಂಭವ

ರಾಷ್ಟ್ರೀಯ ಹೆದ್ದಾರಿ 75ರ ರಸ್ತೆ ಬದಿಯಲ್ಲಿ ಗುಡ್ಡ ಕುಸಿತವಾಗುವ ಸಾಧ್ಯತೆ ಇದೆ. ಈಗಾಗಲೇ ಗುರುತಿಸಿರುವ 12 ಸ್ಥಳಗಳ ಜೊತೆಗೆ ಮಣ್ಣು ಸಡಿಲಗೊಂಡು ಕುಸಿಯುವ ಹಂತದಲ್ಲಿರುವುದನ್ನು ಕೂಡ ಗುರುತಿಸಿ ಮುನ್ನೆಚ್ಚರಿಕೆ ವಹಿಸಬೇಕು ಎಂದು ನಿರ್ದೇಶನ ನಿರ್ದೇಶನ ನೀಡಿದರು.

ರಸ್ತೆ ಬದಿಯ ಚರಂಡಿಗಳನ್ನು ಸ್ವಚ್ಛಗೊಳಿಸಿ ಚರಂಡಿ ನೀರು ಸರಾಗವಾಗಿ ಹರಿದು ಹೋಗುವಂತೆ ನೋಡಿಕೊಳ್ಳಬೇಕು. ವಾಹನಗಳ ಸಂಚಾರಕ್ಕೆ ಅಡಚಣೆ ಉಂಟಾದಲ್ಲಿ ವಾರ್ನಿಂಗ್ ಅಲರ್ಟ್ ಫಲಕಗಳನ್ನು ಅಳವಡಿಕೆಗೆ ಕ್ರಮವಹಿಸಲು ತಿಳಿಸಿದರು. ತುರ್ತು ಸಂದರ್ಭವನ್ನುಅತ್ಯಂತ ಜಾಗರೂಕತೆಯಿಂದ ನಿರ್ವಹಿಸಲು ಅಂತರ್ಜಾಲ ಸಂಪರ್ಕ ದೊರೆಯದ ಸಂದರ್ಭದಲ್ಲಿ ವಾಕಿಟಾಕಿ ಬಳಕೆಗೆ ವ್ಯವಸ್ಥೆ ಮಾಡಿಕೊಳ್ಳಬೇಕು. ಅಧಿಕಾರಿಗಳು ಸಮನ್ವಯತೆಯಿಂದ ತಂಡವಾಗಿ ಕರ್ತವ್ಯ ನಿರ್ವಹಿಸುವಂತೆ ಸೂಚಿಸಿದರು.

ಆನೆಮಹಲ್ ಮತ್ತುದೊಡ್ಡತಪ್ಪಲು ಬಳಿ ಕಡ್ಡಾಯವಾಗಿಆರೋಗ್ಯ ಇಲಾಖೆಯ ವತಿಯಿಂದ ಸ್ಥಳದಲ್ಲೆ ಸುಸಜ್ಜಿತ ಅಂಬುಲೆನ್ಸ್ಇರುವಂತೆ ಹಾಗೂ ಪ್ರಥಮಚಿಕಿತ್ಸೆಗೆ ಅಗತ್ಯ ಔಷಧಿಗಳು ಅದರಲ್ಲಿರುವಂತೆ ನೋಡಿಕೊಳ್ಳಿ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗೆ ಸೂಚಿಸಿದರು.

ಮಳೆಗಾಲದಲ್ಲಿ ಸಾರ್ವಜನಿಕರ ಸಂಚಾರಕ್ಕೆ ತೊಂದರೆಯಾಗದಂತೆ ರಸ್ತೆ ಗುಂಡಿಗಳನ್ನು ಮುಚ್ಚಲು ತಿಳಿಸಿದರಲ್ಲದೆ, ಸಂಚಾರಕ್ಕೆ ಅಡಚಣೆ ಉಂಟಾದ ಸಂದರ್ಭದಲ್ಲಿ ಸಾರ್ವಜನಿಕರಿಗೆ ತೊಂದರೆಯಾಗದಂತೆ ಬದಲಿ ಮಾರ್ಗದ ಬಗ್ಗೆ ಕ್ರಮವಹಿಸಿ ಮಾಧ್ಯಮಗಳ ಮೂಲಕ ಮಾಹಿತಿ ಒದಗಿಸಲು ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಮುಂದಿನ ಮೂರು ತಿಂಗಳ ಮಳೆಗಾಲದಲ್ಲಿ ಸಂಭವಿಸಬಹುದಾದ ಅಡತಡೆಗಳನ್ನು ನಿರ್ವಹಿಸಲು ಅಗತ್ಯ ಪರಿಕರಗಳೊಂದಿಗೆ ಅಧಿಕಾರಿಗಳು ಸಜ್ಜಾಗಬೇಕು. ದಿನದ 24 ಗಂಟೆಯು ಮಾನವೀಯತೆ ದೃಷ್ಟಿಯಿಂದ ಕೆಲಸ ನಿರ್ವಹಿಸಬೇಕು ಎಂದರು.

# ಹಾಸನದಲ್ಲಿ ಇಂದು ಕೆಂಪೇಗೌಡ ಜಯಂತಿ




ಹಾಸನ: ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಹಲವು ಸಂಘಟನೆಗಳ ಆಶ್ರಯದಲ್ಲಿ ನಾಳೆ ನಾಡಪ್ರಭು ಕೆಂಪೇಗೌಡ ಅವರ ಅದ್ದೂರಿ ಜಯಂತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ. ಎಚ್.ಎಲ್. ಮಲ್ಲೇಶಗೌಡ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಗುರುವಾರ ಮಾತನಾಡಿ, ಬೆಳಗ್ಗೆ 10 ಗಂಟೆಗೆ ಜಿಲ್ಲಾಧಿಕಾರಿ ಕಚೇರಿ ಬಳಿಯಿಂದ ಹೊರಡುವ ಕೆಂಪೇಗೌಡರ ಭಾವಚಿತ್ರ ಮೆರವಣಿಗೆಗೆ ಡಿಸಿ ಅವರು ಚಾಲನೆ ನೀಡಲಿದ್ದಾರೆ. ಎಲ್ಲ ಸಮುದಾಯದವರ ಜೊತೆಗೆ ಸುಮಾರು 12 ವಿವಿಧ ಕಲಾ ತಂಡಗಳು ಭಾಗಿಯಾಗಲಿವೆ ಎಂದು ಹೇಳಿದರು.

ಬೆಳಗ್ಗೆ 11 ಗಂಟೆಗೆ ಹಾಸನಾಂಬ ಕಲಾಭವನದಲ್ಲಿ ವೇದಿಕೆ ಕಾರ್ಯಕ್ರಮ ನಡೆಯಲಿದ್ದು, ಶ್ರೀ ಆದಿಚುಂಚನಗಿರಿ ಮಹಾ ಸಂಸ್ಥಾನ ಮಠದ ಪರಮಪೂಜ್ಯ ಜಗದ್ಗುರು ಶ್ರೀ ಡಾ.ನಿರ್ಮಲಾನಂದನಾಥ ಮಹಾಸ್ವಾಮೀಜಿ ಅವರು ದಿವ್ಯ ಸಾನಿಧ್ಯವಹಿಸುವರು. ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರ ಉಪಸ್ಥಿತಿಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಕೆ.ಎನ್.ರಾಜಣ್ಣನ ಉದ್ಘಾಟನೆ ನೆರವೇರಿಸುವರು ಎಂದರು.

ಅರಸೀಕೆರೆ ಶಾಸಕ ಹಾಗೂ ಕರ್ನಾಟಕ ಗೃಹ ಮಂಡಳಿ ಅಧ್ಯಕ್ಷ ಕೆ.ಎಂ. ಶಿವಲಿಂಗೇಗೌಡ ಗೌರವ ಉಪಸ್ಥಿತಿ ಇರುವರು. ಸ್ಥಳೀಯ ಶಾಸಕ ಹೆಚ್.ಪಿ.ಸ್ವರೂಪ್ ಪ್ರಕಾಶ್ ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ಜಿಲ್ಲೆಯ ಸಂಸದ ಶ್ರೇಯಸ್ ಪಟೇಲ್, ಎಲ್ಲಾ ಶಾಸಕರು, ವಿಧಾನ ಪರಿಷತ್ ಸದಸ್ಯರು, ಮಹಾನಗರಪಾಲಿಕೆ ಅಧ್ಯಕ್ಷ ಎಂ.ಚಂದ್ರೇಗೌಡ, ಅತಿಥಿಗಳಾಗಿ ಕನ್ನಡ ಸಂಸ್ಕೃತಿ ಇಲಾಖೆ ನಿರ್ದೇಶಕರಾದ ಕೆ.ಎಂ.ಗಾಯತ್ರಿ, ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನಸ್ವಾಮಿ, ಶ್ರೀ ಶಂಭುನಾಥ ಸ್ವಾಮೀಜಿ, ಜಿ.ಎಲ್.ಮುದ್ದೇಗೌಡ ಮೊದಲಾದವರು ಭಾಗವಹಿಸುವರು. ಮಂಡ್ಯದ ನಿವೃತ್ತ ಪ್ರಾಧ್ಯಾಪಕ ಡಾ.ಮ.ರಾಮಕೃಷ್ಣ ಉಪನ್ಯಾಸ ನೀಡುವರು ಎಂದು ವಿವರಿಸಿದರು.

# ದಲಿತ ಮುಖಂಡರ ಬಂಧನ ಖಂಡಿಸಿ ಪ್ರತಿಭಟನೆ




ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಬೇಲೂರು: ಬೆಂಗಳೂರು ಗ್ರಾಮಾಂತರ ಜಿಲ್ಲೆ ಚನ್ನರಾಯಪಟ್ಟಣ ಹೋಬಳಿಯಲ್ಲಿ ನಡೆದ ಜಮೀನು ಭೂಸ್ವಾಧೀನ ವಿರೋಧಿ ಹೋರಾಟದಲ್ಲಿ ಪಾಲ್ಗೊಂಡಿದ್ದ ದಲಿತ ಮುಖಂಡರ ಬಂಧನ ಖಂಡಿಸಿ ಗುರುವಾರ ಪಟ್ಟಣದ ತಾಲ್ಲೂಕು ಕಚೇರಿ ಎದುರು ಕರ್ನಾಟಕ ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್ ವಾದ) ಪದಾಧಿಕಾರಿಗಳು ಪ್ರತಿಭಟನೆ ನಡೆಸಿದರು. ದಸಂಸ ರಾಜ್ಯ ಸಂಚಾಲಕ ಮಾವಳ್ಳಿ ಶಂಕರ್, ಕಾರಳ್ಳಿ ಶ್ರೀನಿವಾಸ್ ಸೇರಿ ರೈತ ಮುಖಂಡರ ಬಂಧಿಸುವ ಮೂಲಕ ರಾಜ್ಯ ಸರ್ಕಾರ ಹೋರಾಟದ ಹಕ್ಕನ್ನು ಕಿತ್ತುಕೊಳ್ಳುತ್ತಿದೆ ಎಂದು ಆರೋಪಿಸಿದರು.

ದಸಂಸ ಮೈಸೂರು ವಿಭಾಗೀಯ ಸಂಘಟನಾ ಸಂಚಾಲಕ ಲಕ್ಷ್ಮಣ್ ಮಾತನಾಡಿ, ಚನ್ನರಾಯಪಟ್ಟಣ ಹೋಬಳಿಯ 13 ಗ್ರಾಮಗಳ 1777 ಎಕರೆ ಜಮೀನಿನ ಭೂ ಸ್ವಾಧೀನವು 2013ರ ಕಾಯ್ದೆಗೆ ವಿರುದ್ಧವಾಗಿದೆ. ಕರಾಳ ಕೆಐಎಡಿಬಿ ಭೂಸ್ವಾಧೀನ ಕಾಯ್ದೆ ಪ್ರಕಾರ ಹಿಂದಿನ ಬಿಜೆಪಿ ಸರ್ಕಾರ ರೈತರ ವಿರೋಧ ಧಿಕ್ಕರಿಸಿ ಪ್ರಾಥಮಿಕ ಅಧಿಸೂಚನೆ ಹೊರಡಿಸಿತ್ತು. ಇದನ್ನು ವಿರೋಧಿಸಿ ರೈತರು ಅನಿರ್ದಿಷ್ಟವಾಧಿ ಹೋರಾಟ ನಡೆಸುತ್ತಿದ್ದಾಗ ಸ್ಥಳಕ್ಕೆ ಭೇಟಿ ನೀಡಿದ್ದ ಅಂದಿನ ವಿರೋಧ ಪಕ್ಷದ ನಾಯಕ ಹಾಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ತಮ್ಮ ಸರ್ಕಾರ ಅಧಿಕಾರಕ್ಕೆ ಬಂದರೆ ಬಿಜೆಪಿ ಸರ್ಕಾರದ ಭೂ ಸ್ವಾಧೀನ ಪ್ರಕಟಣೆ ರದ್ದುಪಡಿಸುವ ಭರವಸೆ ನೀಡಿದ್ದರು. ಆದರೆ ಈಗ ಅವರೇ ಭೂ ಸ್ವಾಧೀನಕ್ಕೆ ಮುಂದಾಗಿರುವುದು ಖಂಡನೀಯ ಎಂದರು.

ಮುಖ್ಯಮಂತ್ರಿ ಸಿದ್ಧರಾಮಯ್ಯ ಅವರು ವಿರೋಧ ಪಕ್ಷದಲ್ಲಿದ್ದಾಗ ನೀಡಿದ್ದ ಭರವಸೆಯಂತೆ ನಡೆದುಕೊಳ್ಳಬೇಕು. ಕೆಐಎಡಿಬಿ ಭೂ ಸ್ವಾಧೀನ ಸಂಪೂರ್ಣ ರದ್ದಾಗದೆ ಹೋರಾಟ ನಿಲ್ಲುವುದಿಲ್ಲ ಎಂದು ಕಳೆದ 1180 ದಿನಗಳಿಂದ ನಿರಂತರ ಹೋರಾಟ ಮಾಡುತ್ತಿರುವವರ ಮೇಲೆ ರಾಜ್ಯ ಸರ್ಕಾರ ದರ್ಪ ತೋರಿದ್ದು, ಹಿರಿಯ ದಲಿತ, ರೈತ ಹೋರಾಟಗಾರರನ್ನು ಬಂಧಿಸುವ ಮೂಲಕ ರಾಜ್ಯ ಸರ್ಕಾರ ತಾನೆಷ್ಟು ರೈತ, ದಲಿತ, ಜನ ವಿರೋಧಿ ಎಂಬುದನ್ನು ಸಾಬೀತು ಮಾಡಿದೆ. ಆದ್ದರಿಂದ ದಸಂಸ ರಾಜ್ಯ ನಾಯಕರು ಮತ್ತು ರೈತ ನಾಯಕರನ್ನು ತಕ್ಷಣವೇ ಬಿಡುಗಡೆ ಮಾಡಬೇಕು. ಬೆಂಗಳೂರು ಗ್ರಾಮಾಂತರ ಜಿಲ್ಲಾಧಿಕಾರಿ ಹಾಗೂ ಪ್ರತಿಭಟನಾಕಾರರ ವಿರುದ್ಧ ದೌರ್ಜನ್ಯ ಎಸಗಿದ ಅಲ್ಲಿನ ಡಿಸಿಪಿಯನ್ನು ತಕ್ಷಣವೇ ಅಮಾನತುಗೊಳಿಸಬೇಕೆಂದು ಆಗ್ರಹಿಸಿದರು. ದಲಿತ ಸಂಘರ್ಷ ಸಮಿತಿ ಜಿಲ್ಲಾ ಸಂಘಟನಾ ಸಂಚಾಲಕ ಹೊಯ್ಸಳ, ಜಿಲ್ಲಾ ಸಮಿತಿ ಸದಸ್ಯ ಕೃಷ್ಣಯ್ಯ, ತಾಲ್ಲೂಕು ಸಮಿತಿ ಮುಖಂಡರಾದ ನಿಂಗರಾಜು ಚುಂಗನಹಳ್ಳಿ, ವಸಂತ ಕುಮಾರ್, ಆಟೋ ಲಕ್ಷ್ಮಣ್, ಸತೀಶ್ ನೆಟ್ಟೇಕೆರೆ, ಟೈಲರ್ ಚಂದ್ರು, ಧರ್ಮ, ರುದ್ರೇಶ್ ಮತ್ತಿತರಿದ್ದರು.

# ಹಾಸನ ಪಾಲಿಕೆಗೆ 30ಕೋಟಿ ರೂ. : ಕೇಂದ್ರ ಅಸ್ತು

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ನಗರಸಭೆಯಿಂದ ಮಹಾನಗರ ಪಾಲಿಕೆಯಾಗಿ ಮೇಲ್ದರ್ಜೆಗೇರಿರುವ ಹಾಸನ ನಗರ ವ್ಯಾಪ್ತಿಯ 30 ಪ್ರಮುಖ ರಸ್ತೆಗಳನ್ನು ಮೇಲ್ದರ್ಜೆಗೇರಿಸಲು 30 ಕೋಟಿ ರೂ. ಹೆಚ್ಚುವರಿ ಅನುದಾನ ಬಿಡುಗಡೆಗೆ ಕ್ರಮ ವಹಿಸುವುದಾಗಿ ಕೇಂದ್ರ ಹೆದ್ದಾರಿ ಮತ್ತು ಭೂಸಾರಿಗೆ ಸಚಿವ ನಿತಿನ್ ಗಡ್ಕರಿ ಭರವಸೆ ನೀಡಿದ್ದಾರೆ.

ಹಾಸನ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ರಸ್ತೆ ಅಭಿವೃದ್ಧಿ ಸೇರಿದಂತೆ ವಿವಿಧ ಮೂಲಸೌಕರ್ಯ ಉನ್ನತೀಕರಿಸಲು ವಿಶೇಷ ಹಾಗೂ ಹೆಚ್ಚುವರಿ ಅನುದಾನ ನೀಡಬೇಕೆಂದು ಮೇ 28 ರಂದು ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡ ಕೇಂದ್ರ ಸಚಿವರಿಗೆ ಪತ್ರ ಬರೆದಿದ್ದರು.

ಅದಕ್ಕೆ ಪೂರಕವಾಗಿ ಸ್ಪಂದಿಸಿರುವ ಕೇಂದ್ರ ಸಚಿವರು, ತಮ್ಮ ಪತ್ರ ವಿಷಯ ಗಮನಕ್ಕೆ ಬಂದಿದ್ದು, ನಿಮ್ಮ ಕಾಳಜಿ, ಸದುದ್ದೇಶಕ್ಕೆ ಧನ್ಯವಾದಗಳು. ನಿಮ್ಮ ಕೋರಿಕೆ ಪರಿಗಣಿಸಲಾಗುವುದು. ಅನುದಾನ ಬಿಡುಗಡೆಗೆ ಅನುಮತಿ ನೀಡುವ ಭರವಸೆ ನೀಡಿ ಕಳೆದ ಜೂ.6 ರಂದು ದೇವೇಗೌಡರಿಗೆ ಸಚಿವರು ಮರುಪತ್ರದ ಮೂಲಕ ಪ್ರತಿಕ್ರಿಯಿಸಿದ್ದಾರೆ.



ಶಾಸಕ ಹೆಚ್.ಪಿ. ಸ್ವರೂಪ್ ಸಹ, ಮೇ 23 ರಂದು ದೇವೇಗೌಡರಿಗೆ ಪತ್ರ ಬರೆದು ಮಹಾನಗರ ಪಾಲಿಕೆ ವ್ಯಾಪ್ತಿಗೆ ಹೊಸದಾಗಿ 37 ಹಳ್ಳಿಗಳು ಸೇರ್ಪಡೆ ಆಗಿವೆ. ಆ ಎಲ್ಲ ಹಳ್ಳಿಗಳಿಗೆ ಅತ್ಯಗತ್ಯವಾಗಿ ಬೇಕಿರುವ ರಸ್ತೆ, ಚರಂಡಿ, ವಿದ್ಯುತ್, ಕುಡಿಯುವ ನೀರು, ಸ್ವಚ್ಛತೆ ಇತ್ಯಾದಿ ಮೂಲಭೂತ ಸೌಕರ್ಯ ಕಲ್ಪಿಸಬೇಕಿದೆ. ಅದಕ್ಕಾಗಿ ಹೆಚ್ಚುವರಿಯಾಗಿ ಸಿಆರ್‌ಎಫ್ ನಿಧಿಯಿಂದ 30 ಕೋಟಿ ರೂ. ಅನುದಾನ ಬಿಡುಗಡೆ ಮಾಡುವಂತೆ ಮನವಿ ಮಾಡಿದ್ದರು.

### ಪ್ರಸ್ತಾವನೆ ಸಲ್ಲಿಸಲು ಸೂಚನೆ

ಶಾಸಕರು ಹಾಗೂ ರಾಜ್ಯಸಭೆ ಸದಸ್ಯರು ವಿಶೇಷ ಅನುದಾನ ಕೋರಿ ಪತ್ರ ಬರೆದ ನಂತರ ಸದರಿಯವರ ಪ್ರಸ್ತಾವನೆಗೆ ನಿಯಮಾನುಸಾರ ಪರಿಶೀಲಿಸಿ ಸ್ಪಷ್ಟ ಅಭಿಪ್ರಾಯದೊಂದಿಗೆ ಪ್ರಸ್ತಾವನೆ ಸಲ್ಲಿಸುವಂತೆ ನಗರಾಭಿವೃದ್ಧಿ ಇಲಾಖೆ ಕಾರ್ಯದರ್ಶಿ, ಪೌರಾಡಳಿತ ನಿರ್ದೇಶನಾಲಯಕ್ಕೆ ಸೂಚನೆ ನೀಡಿದ್ದರು. ಅದಾದ ಬಳಿಕ ಪೌರಾಡಳಿತ ನಿರ್ದೇಶಕರು ಹಿಂದಿನ ಜಿಲ್ಲಾಧಿಕಾರಿ ಅವರಿಗೆ ಕಳೆದ ಫೆಬ್ರವರಿಯಲ್ಲಿ ಪತ್ರ ಬರೆದಿದ್ದರು. ತರುವಾಯ ಹಣ ಮಂಜೂರಾತಿ ಬಗ್ಗೆ ಅವಶ್ಯಕ ಪ್ರಸ್ತಾವನೆ ಸಲ್ಲಿಸಲು ಡಿಸಿ, ಪೌರಾಯುಕ್ತರಿಗೆ ಸೂಚಿಸಿದ್ದಾರೆ.

ಎಲ್ಲ 35 ವಾರ್ಡ್ ವ್ಯಾಪ್ತಿಯಲ್ಲಿ ಪ್ರಮುಖವಾಗಿ ರಸ್ತೆ ಅಭಿವೃದ್ಧಿ, ಒಳ ಚರಂಡಿ ನಿರ್ಮಾಣ ಸೇರಿದಂತೆ ಅನೇಕ ಕಾಮಗಾರಿ ಕೈಗೊಳ್ಳಬೇಕಿದೆ ಎಂದು ಯಾವ ವಾರ್ಡ್‌ಗೆ ಎಷ್ಟು ಅನುದಾನದ ಅಗತ್ಯವಿದೆ ಎಂದು ಪತ್ರದಲ್ಲಿ ವಿವರಿಸಿದ್ದರು. ಜೊತೆಗೆ ಆಗಬೇಕಿರುವ ವಿವಿಧ ಅಭಿವೃದ್ಧಿ ಕಾರ್ಯಗಳ ಬಗ್ಗೆ ಸ್ಥಳೀಯ ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳೊಂದಿಗೆ ಸ್ವರೂಪ್ ಸಭೆ ನಡೆಸಿದ್ದರು.

ರಾಜ್ಯ ಸರ್ಕಾರಕ್ಕೂ ಪತ್ರ: ಇದಕ್ಕೂ ಮುನ್ನ ಇದೇ ದೇವೇಗೌಡರ ಮೂಲಕ ರಾಜ್ಯ ಸರ್ಕಾರಕ್ಕೆ ಪತ್ರ ಬರೆದಿದ್ದ ಸ್ವರೂಪ್, ನಗರಸಭೆಯನ್ನು ಮೇಲ್ದರ್ಜೆಗೇರಿಸಿ ಸುತ್ತಲಿನ 25 ಗ್ರಾಮಗಳನ್ನು ಮಹಾನಗರ ಪಾಲಿಕೆಗೆ ಸೇರ್ಪಡೆ ಮಾಡಿರುವುದರಿಂದ ಸದರಿ ಗ್ರಾಮಗಳಿಗೆ ಮೂಲಸೌಕರ್ಯ ಕಲ್ಪಿಸಲು ವಿಶೇಷ ಅನುದಾನ ಬಿಡುಗಡೆ ಮಾಡಿಸಿಕೊಡಬೇಕೆಂದು ಕೋರಿದ್ದರು.


### ವೈದ್ಯೆ ಸರ ಕಿತ್ತೊಯ್ದ ಕದೀಮರು

ಚನ್ನರಾಯಪಟ್ಟಣ: ವಾಕಿಂಗ್ ಮಾಡುತ್ತಿದ್ದ ಮಹಿಳೆಯ ಕೊರಳಿಂದ 2.90 ಲಕ್ಷ ರೂ. ಮೌಲ್ಯದ ಚಿನ್ನದ ಸರ ದೋಚಿರುವ ಘಟನೆ ಪಟ್ಟಣದ ಕೆಇಬಿ ರಸ್ತೆಯಲ್ಲಿ ನಡೆದಿದೆ.

ಪಟ್ಟಣದ ಕುಮಾರ್ ನರ್ಸಿಂಗ್ ಹೋಂನಲ್ಲಿ ವೈದ್ಯೆ ಡಾ. ಶೋಭಾರಾಣಿ ಬುಧವಾರ ರಾತ್ರಿ 8 ಗಂಟೆ ಸಮಯದಲ್ಲಿ ರೂಪ ಎಂಬುವರ ಜೊತೆಗೆ ವಾಕಿಂಗ್‌ಗೆ ಹೋಗುತ್ತಿದ್ದಾಗ ಎದುರುಗಡೆಯಿಂದ ಬೈಕ್‌ನಲ್ಲಿ ಬಂದ ಇಬ್ಬರು ಅಪರಿಚಿತರು ಡಾ. ಶೋಭಾರಾಣಿ ಅವರ ಕೊರಳಿಗೆ ಕೈ ಹಾಕಿ ಚಿನ್ನದ ಸರ ಕಿತ್ತುಕೊಂಡಿದ್ದಾರೆ. ಪಟ್ಟಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

### 2 ಹಸು, ಹೋರಿ ಕರು ಕಳವು

ಬೇಲೂರು: ಜಮೀನಿನಲ್ಲಿ ಮೇಯಲು ಬಿಟ್ಟಿದ್ದ 75 ಸಾವಿರ ರೂ. ಬೆಲೆಯ 2 ಹಸು ಹಾಗು ಒಂದು ಹೋರಿ ಕರು ಕಳವು ಮಾಡಿರುವ ಘಟನೆ ತಾಲ್ಲೂಕಿನ ಬಾಳಗುಲಿ ಗ್ರಾಮದಲ್ಲಿ ನಡೆದಿದೆ. ಅರೇಹಳ್ಳಿಯ ಇಸ್ಮಾಯಿಲ್ ಜಬೀವುಲ್ಲಾ ಅವರಿಗೆ ಸೇರಿದ ಹಸು ಹಾಗೂ ವಾಟೆಹೊಳೆ ಗ್ರಾಮದ ದೇವರಾಜು ಅವರ ಹೋರಿ ಕರು ಕಳುವಾಗಿದೆ. ಬಾಳಗುಲಿ ಗ್ರಾಮದ ತಮ್ಮ ಜಮೀನಿನಲ್ಲಿ ರಾಸುಗಳನ್ನು ಮೇಯಲು ಬಿಟ್ಟಿದ್ದರು. ಸಂಜೆಯಾದರೂ ಹಸು ಹಾಗೂ ಹೋರಿ ಕರು ಮನೆಗೆ ಬಾರದ ಹಿನ್ನೆಲೆಯಲ್ಲಿ ಜಮೀನಿಗೆ ತೆರಳಿ ನೋಡಿದಾಗ ಅಲ್ಲಿ ಇಲ್ಲದಿರುವುದು ತಿಳಿದಿದೆ. ಇಬ್ಬರೂ ಸೇರಿ ಎಲ್ಲಾ ಕಡೆ ಹುಡುಕಿದರೂ ಪತ್ತೆಯಾಗಿಲ್ಲ.



ಚನ್ನರಾಯಪಟ್ಟಣ: ಬೆಂಗಳೂರಿನ ಗೃಹ ಕಚೇರಿಯಲ್ಲಿ ಗ್ರಾಮೀಣಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಅವರನ್ನು ಭೇಟಿಯಾದ ಶಾಸಕ ಸಿ.ಎನ್. ಬಾಲಕೃಷ್ಣ ಚನ್ನರಾಯಪಟ್ಟಣ ಪುರಸಭೆಯನ್ನು ನಗರಸಭೆಯನ್ನಾಗಿ ಮೇಲ್ದರ್ಜೆಗೆರಿಸುವ ಪ್ರಸ್ತಾವನೆ ಸಲ್ಲಿಸಿದರು. ನಗರಸಭೆಗೆ ತಾಲ್ಲೂಕಿನ ಮಾರೇನಹಳ್ಳಿ, ನಾಗಸಮುದ್ರ, ಡಿ.ಕಾಳೇನಹಳ್ಳಿ, ಗುಂಡಶೆಟ್ಟಿಹಳ್ಳಿ, ಗದ್ದೆಬಿಂಡೇನಹಳ್ಳಿ, ಜನಿವಾರ, ಹೊಸೂರು, ಕಗ್ಗಲೀಕಾವಲು, ಶೆಟ್ಟಿಹಳ್ಳಿ, ಚಾಮಡಿಹಳ್ಳಿ, ಕೆರೆಚಿಕ್ಕೇನಹಳ್ಳಿ ಹಾಗೂ ಬೆಲಸಿಂದ ಸೇರಿದಂತೆ 12 ಗ್ರಾಮಗಳನ್ನು ಸೇರಿಸುವ ಕಡತಕ್ಕೆ ಅನುಮೋದನೆ ನೀಡಬೇಕು ಎಂದು ಮನವಿ ಮಾಡಿದರು. ಮುಖಂಡರಾದ ವಡ್ಡರಹಳ್ಳಿ ರಾಜಣ್ಣ ಇದ್ದರು.

### ಹೃದಯಾಘಾತದಿಂದ ಯುವತಿ ಸಾವು

ಹೊಳೆನರಸೀಪುರ: ತಾಲ್ಲೂಕಿನ ಕಟ್ಟಳ್ಳಿ ಗ್ರಾಮದಲ್ಲಿ ಹೃದಯಾಘಾತದಿಂದ ಯುವತಿ ಮೃತಪಟ್ಟಿದ್ದಾರೆ.

ಸುಪ್ರಿಯಾ (22) ಮೃತ ಯುವತಿ. ಕಟ್ಟಳ್ಳಿ ಗ್ರಾಮದ ಕೃಷ್ಣಮೂರ್ತಿ-ರೂಪ ದಂಪತಿ ಪುತ್ರಿಯೊಂದಿಗೆ ಬೆಂಗಳೂರಿನ ಬ್ಯಾಟರಾಯನಪುರದಲ್ಲಿ ವಾಸವಿದ್ದರು. ಮುಕ್ತ ವಿಶ್ವವಿದ್ಯಾಲಯದಲ್ಲಿ ಪದವಿ ವ್ಯಾಸಂಗ ಮಾಡುತ್ತಿದ್ದ ಸುಪ್ರಿಯಾ ವಿದ್ಯಾಭ್ಯಾಸದ ಜೊತೆಗೆ ಕೆಲಸ ಮಾಡುತ್ತಿದ್ದಳು.

ಜೂ. 25 ರಂದು ಮನೆಯಲ್ಲಿದ್ದಾಗ ಎದೆ ನೋವು ಕಾಣಿಸಿಕೊಂಡಿತ್ತು. ಕೂಡಲೇ ಪೋಷಕರಿಗೆ ಹೇಳಿ ಕುಸಿದು ಬಿದ್ದಿದ್ದರು. ತಕ್ಷಣ ಪೋಷಕರು ಯುವತಿಯನ್ನು ಆಸ್ಪತ್ರೆಗೆ ಕರೆದೊಯ್ದಿದ್ದಾರೆ. ಅಷ್ಟರಲ್ಲಿ ಸುಪ್ರಿಯಾ ಸಾವನ್ನಪ್ಪಿದ್ದರು. ಕಳೆದ ಒಂದು ತಿಂಗಳ ಅವಧಿಯಲ್ಲಿ ಜಿಲ್ಲೆಯಲ್ಲಿ 15 ಮಂದಿ ಹೃದಯಾಘಾತದಿಂದ ಸಾವನ್ನಪ್ಪಿರುವುದು ಆತಂಕ ಸೃಷ್ಟಿಸಿದೆ.

# ಬಿರುಮಳೆಗೆ ಏನಾಗಿದೆ ಕಾಫಿ ಬೆಳೆ ಸ್ಥಿತಿ?

- ಪ್ರಸಾದ್ ರಕ್ಷಿದಿ

ಈ ವರ್ಷ ಇಂದಿನವರೆಗೆ , 26 ಜೂನ್ 2025 ಬೆಳಗ್ಗಿನ ತನಕ ನಮಗೆ ಒಟ್ಟು 60 ಇಂಚು 65 ಸೆಂಟ್ಸ್ ಮಳೆಯಾಗಿದೆ. ಅಂದರೆ 1565 ಮಿ.ಮೀ. ಮಳೆ. ಇದು ಜೂನ್ ಕೊನೆಯ ವೇಳೆಗೆ ಇಲ್ಲಿ ಸುರಿದಿರುವ ಒಂದು ಶತಮಾನದ ಅತಿಹೆಚ್ಚು ಮಳೆ. ನಮ್ಮಲ್ಲಿನ ವಾರ್ಷಿಕ ಸರಾಸರಿ ಮಳೆ 110 ಇಂಚುಗಳು. ಕಳೆದ ವರ್ಷ ಇಡೀ ವರ್ಷ ಸುರಿದ ಮಳೆ ಶತಮಾನದ ದಾಖಲೆ ಆಗಿತ್ತು. ಆದರೆ ಮಳೆ ಪ್ರಾರಂಭದಲ್ಲಿ ಕಡಿಮೆ ಇದ್ದು ಜುಲೈ ಒಂದೇ ತಿಂಗಳಿನಲ್ಲಿ 84 ಇಂಚು ಮಳೆ ಸುರಿದು ವರ್ಷದ ಕೊನೆಗೆ ಒಟ್ಟು 164 ಇಂಚು ಮಳೆಯಾಗಿತ್ತು. ಈ ವರ್ಷ ಮುಂದೆ ಏನಾಗುವುದೋ ನೋಡಬೇಕು. ಕಳೆದ ವರ್ಷದ ಅತಿ ಹೆಚ್ಚು ಮಳೆಯಿಂದಾಗಿ ಕಾಫಿ ಅರ್ಧಕ್ಕರ್ಧ ಉದುರಿ ಹೋದರೂ ಕಾಫಿ ಕೊಯ್ಲಿನ ವೇಳೆಗೆ ದೊರೆತ ಅತ್ಯುತ್ತಮ ಬೆಲೆಯಿಂದಾಗಿ ಕೃಷಿಕರು ಖುಷಿಯಲ್ಲಿದ್ದರು. ಮೆಣಸಿಗೂ ಕಿಲೋ 700 ರೂ.ಗಳ ಆಸುಪಾಸಿನಲ್ಲೇ ಇದ್ದರೂ ಶೇ. 90 ರಷ್ಟು ಕಾಫಿ ಕೃಷಿಕರಿಗೆ ಕಳೆದ ವರ್ಷ ಮೆಣಸಿನ ಬೆಳೆ ಹಿಂದಿನ ವರ್ಷದ ಬೆಳೆಯ ಕಾಲು ಭಾಗ ಮಾತ್ರ. ಕಾಫಿಗೆ ಉತ್ತಮ ಬೆಲೆ ಸಿಕ್ಕಿದ್ದರಿಂದ ಮೆಣಸು ಹೆಚ್ಚು ಸುದ್ದಿಯಾಗಿಲ್ಲ. ಸಿಕ್ಕಿದ್ದಕ್ಕೆ ತೃಪ್ತರಾದರು. ಈ ವರ್ಷ ಕಾಫಿಗೆ ಸುಮಾರಾಗಿ ಹೂವಿನ ಮಳೆಗಳು ಸಕಾಲಕ್ಕೆ ಸಿಕ್ಕಿವೆ. ನೀರು ಹೊಡೆಯುವವರು. ಹೊಡೆದಿದ್ದಾರೆ. ಆದರೆ ಈ ವರ್ಷ ಹೂವರಳಿದಾಗ ಜೇನ್ನೊಣಗಳ ಹಾರಾಟ ಇಲ್ಲ ವೇ ಇಲ್ಲ ಎನ್ನುವಷ್ಟು ಕಡಿಮೆ ಇತ್ತು. ಗಾಳಿಯೂ ಅಗತ್ಯ ವೇಗದಲ್ಲಿ ಬೀಸಲಿಲ್ಲ. ಪರಾಗಸ್ಪರ್ಶದ ಪ್ರಮಾಣ ಅತಿ ಕಡಿಮೆ ಆದಂತೆ ತೋರುತ್ತದೆ. ಹೆಚ್ಚಿನ ತೋಟಗಳಲ್ಲಿ ಹೀಚುಗಟ್ಟಿ ಪ್ರಮಾಣ ಬಹಳ ಕಡಿಮೆ ಕಾಣಿಸುತ್ತಿದೆ.



ಮೆಣಸು ಗೆರೆ ಬಿಡುತ್ತಿದೆ. ಆದರೆ ಈಗಲೇ ತೋಟದಲ್ಲಿ ಶೀತ ಏರಿರುವುದರಿಂದ ಅಲ್ಲಿಗೇ ನಿಂತು ಹೋದಂತೆ ಕಾಣುತ್ತಿದೆ. ಇನ್ನು ಹದಿನೈದು ದಿನದಲ್ಲಿ ಸ್ಪಷ್ಟ ಚಿತ್ರಣ ಸಿಗುತ್ತದೆ.

ಅರೆಬಿಕಾ ಕಾಫಿ ಬೆಲೆ ಹೆಚ್ಚೂ ಕಡಿಮೆ ಸ್ಥಿರವಾಗಿ ಇದ್ದರೂ ರೊಬಸ್ಟ ಕಾಫಿ ಬೆಲೆ ಇಳಿಯುತ್ತಲೇ ಇರುವುದು ಚಿಂತೆಗೆ ಕಾರಣವಾಗಿದೆ. ಕಳೆದ ವರ್ಷಕ್ಕೆ ಹೋಲಿಸಿದರೆ ಕೃಷಿ ಖರ್ಚು ಶೇ. 40 ಹೆಚ್ಚಾಗಿದೆ. ಮಳೆ ಸುರಿಯುತ್ತಿದೆ ಆದ್ದರಿಂದ ಕಾಫಿ ನಾಡಿನ ಸ್ಥಿತಿಗತಿ ಬಹಳ ಆಶಾದಾಯಕವಾಗಿ ಏನೂ ಇಲ್ಲ.




# 'ನನ್ಸಿರಿ' ಕಾಂದಬರಿ ಬಿಡುಗಡೆ ನಾಳೆ

ಹಾಸನ: ವಿಜಯ ಕರ್ನಾಟಕ ದಿನಪತ್ರಿಕೆ ಹಿರಿಯ ವರದಿಗಾರ ಜಿ.ಪ್ರಕಾಶ್ ಅವರ ಚೊಚ್ಚಲ ಕಾದಂಬರಿ 'ನನ್ಸಿರಿ, ಒಲವೇ ಸಿರಿಯು... ನಗುವೇ ನಿಧಿಯು..' ಬಿಡುಗಡೆ ಸಮಾರಂಭವನ್ನು ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರ ಆವರಣದ ನಯನಾ ಸಭಾಂಗಣದಲ್ಲಿ ಜೂ. 28ರಂದು ಬೆಳಗ್ಗೆ 10.30ಕ್ಕೆ ಆಯೋಜಿಸಲಾಗಿದೆ.

ಹಾಡ್ಲಹಳ್ಳಿ ಪಬ್ಲಿಕೇಷನ್ ಹೊರತರುತ್ತಿರುವ ಉತ್ಕಟ ಪ್ರೇಮಕಥಾ ಹಂದರದ ಕಾದಂಬರಿಯನ್ನು ವಿಜಯ ಕರ್ನಾಟಕ ಪ್ರಧಾನ ಸಂಪಾದಕ ಸುದರ್ಶನ ಚನ್ನಂಗಿಹಳ್ಳಿ ಬಿಡುಗಡೆ ಮಾಡುವರು. ಹಿರಿಯ ಸಾಹಿತಿ ಜೋಗಿ ಅಧ್ಯಕ್ಷತೆ ವಹಿಸುವರು. ಸಾಹಿತಿ ವಿದ್ಯಾರಶ್ಮಿ ಪೆಲತ್ತಡ್ಕ ಕೃತಿ ಪರಿಚಯಿಸುವರು.

ರಾಜ್ಯ ಕಾರ್ಯನಿರತ ಪತ್ರಕರ್ತರ ಸಂಘ ಶಿವಾನಂದ ತಗಡೂರು, ಹಿರಿಯ ಪತ್ರಕರ್ತ ಹೆಚ್.ಬಿ. ಮದನಗೌಡ ಅತಿಥಿಗಳಾಗಿ ಪಾಲ್ಗೊಳ್ಳುವರು. ಜಿ.ಪ್ರಕಾಶ್ ಕೃತಿಕಾರರ ನುಡಿಗಳನ್ನಾಡುವರು. ತಮ್ಮೆಲ್ಲ ಆತ್ಮೀಯರು, ಹಿತೈಷಿಗಳು, ಸಾಹಿತ್ಯಾಸಕ್ತರು ಕಾರ್ಯಕ್ರಮದಲ್ಲಿ ಭಾಗವಹಿಸುವಂತೆ ಜಿ.ಪ್ರಕಾಶ್ ಆಹ್ವಾನಿಸಿದ್ದಾರೆ.

# ಕಸ ವಿಲೇವಾರಿ ಘಟಕ ಶೀಘ್ರ ಕಾರ್ಯಾರಂಭ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್



ಸಕಲೇಶಪುರ: ಪಟ್ಟಣದಲ್ಲಿ ಕಸ ವಿಲೇವಾರಿ ಘಟಕದ ತಾಂತ್ರಿಕ ದೋಷಗಳನ್ನು ಸರಿಪಡಿಸಿ ಶೀಘ್ರವಾಗಿ ಕಾರ್ಯಾರಂಭ ಮಾಡಲಾಗುವುದು ಎಂದು ಪುರಸಭೆ ಅಧ್ಯಕ್ಷೆ ಜ್ಯೋತಿ ರಾಜಕುಮಾರ್ ಹೇಳಿದರು.

ಪಟ್ಟಣದ ಪುರಭವನದಲ್ಲಿ ಹಮ್ಮಿಕೊಂಡಿದ್ದ ಸಾಮಾನ್ಯ ಸಭೆಯಲ್ಲಿ ಮಾತನಾಡಿ, ಇತ್ತೀಚಿನ ದಿನಗಳಲ್ಲಿ ಪಟ್ಟಣ ವ್ಯಾಪ್ತಿಯಲ್ಲಿ ಕಸ ವಿಲೇವಾರಿ ಸಮಸ್ಯೆಯು ತೀವ್ರ ರೀತಿಯಲ್ಲಿ ಕಾಡುತ್ತಿತ್ತು. ಪಟ್ಟಣ ಸಮೀಪದ ಮಳಲಿ ಗ್ರಾಮದಲ್ಲಿ ಬಹುತೇಕ ಕಸ ವಿಲೇವಾರಿ ಘಟಕದ ಕಾಮಗಾರಿ ಪೂರ್ಣಗೊಂಡಿದೆ. ಕೆಲವು ತಾಂತ್ರಿಕ ದೋಷಗಳನ್ನು ಸರಿಪಡಿಸಿ ಹಸಿರು ಪೀಠದ ನಿರ್ದೇಶನದಂತೆ ತ್ಯಾಜ್ಯ ವಿಲೇವಾರಿಯನ್ನು ಪ್ರಾರಂಭಿಸಲು ಕಾರ್ಯಪ್ರವೃತ್ತರಾಗುತ್ತೇವೆ ಎಂದು ಹೇಳಿದರು.

ಪಟ್ಟಣದ ಹೇಮಾವತಿ ಸೇತುವೆಯ ಮುಂಭಾಗದಲ್ಲಿ ರೋಟರಿ ಸಂಸ್ಥೆಯವರು ನಿರ್ಮಿಸಿರುವ ಹೇಮಾವತಿ ಪ್ರತಿಮೆಯ ಮುಂಭಾಗದ 50 ಮೀಟರ್ ವ್ಯಾಪ್ತಿಯಲ್ಲಿ ಯಾವುದೇ ರೀತಿಯ ಕಾರ್ಯಚಟುವಟಿಕೆಯನ್ನು ನಿಷೇಧಿಸಲಾಗಿದೆ ಎಂದು ಹೇಳಿದರು.

ಇತ್ತೀಚೆಗೆ ಕೆಲವರು ಪ್ರತಿಮೆಯ ಮುಂಭಾಗದಲ್ಲೇ ಪ್ಲಾಸ್ಟಿಕ್, ವಾಹನ ಇತರ ವಸ್ತುಗಳನ್ನು ಇಟ್ಟುಕೊಂಡು ವ್ಯಾಪಾರ ಮಾಡುತ್ತಿದ್ದ ಪರಿಣಾಮ ಪ್ರತಿಮೆಯು ಸಾರ್ವಜನಿಕರಿಗೆ ಕಾಣುತ್ತಿರಲಿಲ್ಲ.

ಈ ಎಲ್ಲ ವಿಷಯಗಳನ್ನು ಗಮನಕ್ಕೆ ತೆಗೆದುಕೊಂಡು ಕ್ರಮ ಕೈಗೊಂಡಿದ್ದೇವೆ ಎಂದು ಹೇಳಿದರು.

ಸುಭಾಷ್ ಮೈದಾನ ದೊಡ್ಡಿ ಹಾಗೂ ತರಕಾರಿ ಮಾರ್ಕೆಟ್ ಸಮೀಪದಲ್ಲಿರುವ ಎಲ್ಲ ಪುರಸಭಾ ಮಳಿಗೆಗಳನ್ನು ಶೀಘ್ರದಲ್ಲೇ ಹರಾಜು ಮಾಡಲಾಗುವುದು ಎಂದು ತಿಳಿಸಿದರು.

ಇತ್ತೀಚೆಗೆ ಪುರಸಭಾ ವ್ಯಾಪ್ತಿಯಲ್ಲಿ ಕಾಮಗಾರಿ ನಡೆಸುತ್ತಿರುವ ಗುತ್ತಿಗೆದಾರರು ಗುತ್ತಿಗೆ ಕಾರ್ಯಗಳನ್ನು ಅರ್ಧಕ್ಕೆ ನಿಲ್ಲಿಸಿ ಹೋಗಿದ್ದಾರೆ ಎಂದು ಪುರಸಭಾ ಮಾಜಿ ಅಧ್ಯಕ್ಷ ಎಸ್. ಜಿ. ಆದರ್ಶ್ ಸಭೆಯ ಗಮನಕ್ಕೆ ತಂದಾಗ, ಗುತ್ತಿಗೆದಾರರನ್ನು ಕೂಡಲೇ ಕಾಮಗಾರಿಯನ್ನು ಪೂರ್ಣಗೊಳಿಸುವಂತೆ ಆದೇಶಿಸಲಾಗುವುದು ಎಂದು ತಿಳಿಸಿದರು.

ಕಳೆದ ವಿಧಾನಸಭಾ ಚುನಾವಣೆಯಲ್ಲಿ ಮಾಜಿ ಶಾಸಕ ಎಚ್.ಕೆ. ಕುಮಾರಸ್ವಾಮಿ ಅವರು ನಗರೋತ್ಥಾನ ಯೋಜನೆಯಡಿ ನಾಲ್ಕು ಕೋಟಿ ರೂಪಾಯಿ ಅನುದಾನದಲ್ಲಿ ಕಾಮಗಾರಿಗೆ ಚಾಲನೆ ನೀಡಿದ್ದರು. ವಿಧಾನಸಭಾ ಚುನಾವಣೆಯ ನಂತರ ಬಿಡುಗಡೆಯಾದ ಹಣವನ್ನು ಹಿಂಪಡೆದ ಪರಿಣಾಮ, ಕಾಮಗಾರಿ ಪೂರ್ಣಗೊಳಿಸಲು ಸಾಧ್ಯವಾಗಿರಲಿಲ್ಲ. ಸರ್ಕಾರವು ಮತ್ತೆ ನಾಲ್ಕು ಕೋಟಿ ರೂ. ನಗರೋತ್ಥಾನ ಅಡಿಯಲ್ಲಿ ಬಿಡುಗಡೆ ಮಾಡಿದ್ದು, ಶಾಸಕರು ಆದಷ್ಟು ಶೀಘ್ರವಾಗಿ ಕ್ರಿಯಾಯೋಜನೆ ತಯಾರಿಸಿದರೆ ಪಟ್ಟಣ ವ್ಯಾಪ್ತಿಯಲ್ಲಿ ಫುಡ್ ಕೋರ್ಟ್, ಬಸ್ ಶೆಲ್ಟರ್ ಸೇರಿದಂತೆ ಇನ್ನಿತರ ಅಗತ್ಯ ಕಾರ್ಯಗಳನ್ನು ಕೈಗೊಳ್ಳಲಾಗುವುದು ಎಂದು ಹೇಳಿದರು.

ಪುರಸಭಾ ಉಪಾಧ್ಯಕ್ಷೆ ಝರೀನಾ, ಪುರಸಭಾ ಮಾಜಿ ಅಧ್ಯಕ್ಷ ಆದರ್ಶ್, ಯಾದಗ, ಕಾಡಪ್ಪ, ಮುಖೇಶ್ ಶೆಟ್ಟಿ, ಮುಖ್ಯಾಧಿಕಾರಿ ಮಹೇಶ್ವರಪ್ಪ ಹಾಗೂ ಇತರರಿದ್ದರು.

# ಕೋಗಿಲೆಮನೆ ಗ್ರಾಪಂಗೆ ಶಿವವೀರ ಸಂಗಪ್ಪ ಅವಿರೋಧ ಆಯ್ಕೆ



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಬೇಲೂರು: ತಾಲ್ಲೂಕಿನ ಕೋಗಿಲೆಮನೆ ಗ್ರಾಮ ಪಂಚಾಯಿತಿ ಅಧ್ಯಕ್ಷರಾಗಿ ಶಿವವೀರಪ್ಪ ಸಂಗಪ್ಪ ಅವಿರೋಧ ಆಯ್ಕೆಯಾಗಿದ್ದಾರೆ.

ಶಿವಕುಮಾರ್ ಅವರ ರಾಜೀನಾಮೆಯಿಂದ ತೆರವಾಗಿದ್ದ ಸ್ಥಾನಕ್ಕೆ ಚುನಾವಣೆ ಪ್ರಕ್ರಿಯೆ ನಡೆಯಿತು. 8 ಸದಸ್ಯಬಲದ ಗ್ರಾಪಂಗೆ ಹಾಡ್ಲಗೆರೆ ಗ್ರಾಮದ ಶಿವವೀರಪ್ಪ ಸಂಗಪ್ಪ ಒಬ್ಬರೇ ನಾಮಪತ್ರ ಸಲ್ಲಿಸಿದ ಹಿನ್ನೆಲೆಯಲ್ಲಿ ಚುನಾವಣಾಧಿಕಾರಿ ತಹಶೀಲ್ದಾರ್ ಎಂ. ಮಮತಾ ಅವಿರೋಧ ಆಯ್ಕೆ ಘೋಷಿಸಿದರು.

ಗ್ರಾಪಂ ನೂತನ ಅಧ್ಯಕ್ಷ ಸಂಗಪ್ಪ ಮಾತನಾಡಿ, ಎಲ್ಲಾ ಸದಸ್ಯರ ಸಹಕಾರದೊಂದಿಗೆ ಗ್ರಾಮ ಪಂಚಾಯಿತಿ ಅಭಿವೃದ್ಧಿಗೆ ಸಹಕರಿಸಲಾಗುವುದು. ಗ್ರಾಪಂ ಕಟ್ಟಡ ತಾಲ್ಲೂಕಿನಲ್ಲೇ ಅತ್ಯಂತ ಶಿಥಿಲಾವಸ್ಥೆಯಲ್ಲಿದ್ದು ಶಾಸಕರ ಸಹಕಾರ ಪಡೆದು ಸ್ವಂತ ಕಟ್ಟಡ ಹೊಂದಲು ಜಾಗ ಪಡೆಯಲು ಶಾಸಕರಲ್ಲಿ ಮನವಿ ಮಾಡಿದ್ದು ಎಲ್ಲರ ಸಹಕಾರ ಪಡೆದು ನೂತನ ಕಟ್ಟಡ ಮಾಡುತ್ತೇವೆ. ಈ ಗ್ರಾಪಂ ಒಳಪಡುವ ಎಲ್ಲಾ ಗ್ರಾಮಗಳಿಗೆ ಮೂಲಸೌಕರ್ಯ ನೀಡುವುದಲ್ಲದೆ ಕುಡಿಯುವ ನೀರಿಗೆ ಹೆಚ್ಚಿನ ಆದ್ಯತೆ ನೀಡಿಕೊಂಡು ಬಂದಿದ್ದು ಮುಂದೆ ಎಲ್ಲಾ ರೀತಿಯ ಸಹಕಾರ ನೀಡುತ್ತೇನೆ ಎಂದರು.

ಗ್ರಾಪಂ ಮಾಜಿ ಅಧ್ಯಕ್ಷ ಶೇಷಯ್ಯ ಮಾತನಾಡಿ, ಎಲ್ಲರ ಜೊತೆ ಉತ್ತಮ ಒಡನಾಟ ಇಟ್ಟುಕೊಂಡಿರುವ ಸಂಗಪ್ಪ ಗ್ರಾಮ ಅಭಿವೃದ್ಧಿಗೆ ಮುಂದಾಗಲಿ ಎಂದರು.

ಗ್ರಾಪಂ ಉಪಾಧ್ಯಕ್ಷೆ ಹೇಮಾವತಿ, ಸದಸ್ಯ ಶಿವಕುಮಾರ್, ಪುಟ್ಟಸ್ವಾಮಿ, ಸಾವಿತ್ರಿ, ಮಹದೇವಮ್ಮ, ಸುಶೀಲ, ಪಿಡಿಒ ಚಿದಾನಂದ್, ಕರವೇ ಪ್ರವೀಣ್ ಶೆಟ್ಟಿ ಬಣದ ಪ್ರಧಾನ ಕಾರ್ಯದರ್ಶಿ ಜಯಪ್ರಕಾಶ್ ಹಾಜರಿದ್ದರು.

# ಕಾರ್ಮಿಕ ಕಾನೂನು ಬದಲಾವಣೆಗೆ ಸಿಐಟಿಯು ವಿರೋಧ



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಕಾರ್ಮಿಕ ಕಾನೂನುಗಳ ಬದಲಾವಣೆಗೆ ಮುಂದಾಗಿರುವ ರಾಜ್ಯ ಸರ್ಕಾರ ಕಾರ್ಮಿಕರಿಗೆ ಸಂಕಷ್ಟ ತಂದೊಡ್ಡಲು ಮುಂದಾಗಿದ್ದು ಅದಕ್ಕೆ ಅವಕಾಶ ನೀಡಬಾರದು ಎಂದು ಒತ್ತಾಯಿಸಿ ಸಿಐಟಿಯು ನೇತೃತ್ವದಲ್ಲಿ ಬುಧವಾರ ಕಾರ್ಮಿಕ ಇಲಾಖೆ ಅಧಿಕಾರಿ ಮೂಲಕ ರಾಜ್ಯ ಸರ್ಕಾರಕ್ಕೆ ಮನವಿ ಸಲ್ಲಿಸಿದರು.

ಈಸ್ ಆಫ್ ಡೂಯಿಂಗ್ ಬ್ಯುಸಿನೆಸ್ ನೆಪದಲ್ಲಿ ಕಾರ್ಮಿಕ ಕಾನೂನು ಜಾರಿಗೊಳಿಸಿ ಬಂಡವಾಳಶಾಹಿಗಳಿಗೆ ಅನುಕೂಲ ಮಾಡಿಕೊಡಲಾಗುತ್ತಿದೆ. 2019 ಹಾಗೂ 2020ರಲ್ಲಿ ಪಾರ್ಲಿಮೆಂಟ್ ಅಂಗೀಕರಿಸಿದ ನಾಲ್ಕು ಕಾರ್ಮಿಕ ಕೋಡ್‌ಗಳನ್ನು ಅನುಷ್ಠಾನಗೊಳಿಸಿದರೆ ತನ್ನ ಪ್ರಭಾವ ಕಳೆದುಕೊಳ್ಳುವ ಭಯದಲ್ಲಿರುವ ಸರ್ಕಾರವು ಆ ಸಂಹಿತೆಗಳ ಭಾಗವಾಗಿರುವ ಹಲವು ಕಾರ್ಮಿಕ ವಿರೋಧಿ ಅಂಶ ತಿದ್ದುಪಡಿ ಮಾಡುವ ಮೂಲಕ ಹಿಂಬಾಗಿಲಿನಿಂದ ಕಾರ್ಮಿಕರ ಮೇಲೆ ಪ್ರಹಾರ ನಡೆಸಲು ಮುಂದಾಗಿದೆ. ಈ ತಿದ್ದುಪಡಿಗಳು ಜಾರಿಯಾದರೆ ರಾಜ್ಯದ ಬಹುಸಂಖ್ಯೆಯ ಸಂಘಟಿತ, ಅಸಂಘಟಿತ ಕಾರ್ಮಿಕರು ಹಾಗೂ ದುಡಿಯುವ ಜನರು ಕಾನೂನು ರಕ್ಷಣೆಯಿಂದ ಹೊರಗುಳಿಯುತ್ತಾರೆ ಎಂದರು. ದಿನದ ಕೆಲಸದ ಅವಧಿಯನ್ನು 12 ಗಂಟೆಗೆ ಹೆಚ್ಚಿಸುವುದು, ಉತ್ಪಾದನಾ ವಲಯದಲ್ಲಿ ಮಹಿಳಾ ಕಾರ್ಮಿಕರನ್ನು ರಾತ್ರಿ ಪಾಳಿಯಲ್ಲಿ ಕೆಲಸಕ್ಕೆ ತೊಡಗಿಸುವುದು, ಅಪಾಯಕಾರಿ ಉತ್ಪಾದನಾ ವಿಧಾನಗಳಲ್ಲಿ ಮಹಿಳೆಯರ ನೇಮಕಾತಿ, ವಿದ್ಯುತ್ ಬಳಸುವ ಕಾರ್ಖಾನೆಗಳಲ್ಲಿ ಕಾರ್ಮಿಕರ ಸಂಖ್ಯೆಯನ್ನು 10 ರಿಂದ 20ಕ್ಕೆ ವಿದ್ಯುತ್ ಬಳಸದಿರುವ ಕಾರ್ಖಾನೆಗಳ ಕಾರ್ಮಿಕರ ಸಂಖ್ಯೆಯನ್ನು 20 ರಿಂದ 40ಕ್ಕೆ ಹೆಚ್ಚಿಸಿ ಲಕ್ಷಾಂತರ ಕಾರ್ಮಿಕರನ್ನು ಕಾರ್ಖಾನೆಗಳ ಕಾನೂನುಗಳ ಸವಲತ್ತುಗಳಿಂದ ಹೊರಹಾಕುವುದು, ಕಾರ್ಖಾನೆಗಳನ್ನು ಮುಚ್ಚಲು, ಲೇ-ಆಫ್ ಮಾಡಲು, ರೆಟ್ರೆಂಚ್ ಮಾಡಲು ಸರ್ಕಾರದ ಪೂರ್ವಾನುಮತಿ ಪಡೆಯಬೇಕು ಎಂಬುದಕ್ಕೆ ಇರುವ ಕಾರ್ಮಿಕರ ಸಂಖ್ಯೆನ್ನು 100 ರಿಂದ 300ಕ್ಕೆ ಹೆಚ್ಚಿಸಿ, ಮಾಲೀಕರಿಗೆ ಕಾರ್ಮಿಕರನ್ನು ಕೆಲಸದಿಂದ ತೆಗೆಯಲು ಮುಕ್ತ ಅವಕಾಶ ನೀಡುವುದು ಹೀಗೆ ವಿವಿಧ ತಿದ್ದುಪಡಿ ಜಾರಿಗೊಳಿಸಬಾರದು ಎಂದು ಆಗ್ರಹಿಸಿದರು.

ಸಿಐಟಿಯು ಜಿಲ್ಲಾಧ್ಯಕ್ಷ ಧರ್ಮೇಶ್, ಜಿಲ್ಲಾ ಕಾರ್ಯದರ್ಶಿ ಅರವಿಂದ್, ಗ್ರಾ.ಪಂ. ನೌಕರರ ಸಂಘದ ಪ್ರಧಾನ ಕಾರ್ಯದರ್ಶಿ ಕೆ.ಟಿ. ಹೊನ್ನೇಗೌಡ, ಮಹದೇವಯ್ಯ, ಸರೋಜಮ್ಮ, ವೇದಾವತಿ ಹಾಗೂ ಇತರರಿದ್ದರು.

# ಪಟ್ಟಣ ಅಭಿವೃದ್ಧಿಗೆ 1 ಕೋಟಿ ರೂ. ಬಿಡುಗಡೆ



ಚನ್ನರಾಯಪಟ್ಟಣ: ಪಟ್ಟಣದ ಪಾರ್ಕ್‌ಗಳ ಅಭಿವೃದ್ಧಿಗೆ 1 ಕೋಟಿ ರೂ. ಅನುದಾನ ಬಿಡುಗಡೆಯಾಗಿದೆ ಎಂದು ಶಾಸಕ ಸಿ.ಎನ್. ಬಾಲಕೃಷ್ಣ ಹೇಳಿದರು.

ಹೇಮಾವತಿ ಕಾಲುವೆ ಪಕ್ಕದಲ್ಲಿನ ರಸ್ತೆ ಅಭಿವೃದ್ಧಿ ಸೇರಿ ಹಲವು ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿ ಮಾತನಾಡಿದ ಅವರು, 20 ಲಕ್ಷ ರೂ. ವೆಚ್ಚದಲ್ಲಿ ನಾಲ್ಕು ಉದ್ಯಾನಗಳ ರಿಪೇರಿ, ಒಂದು ಉದ್ಯಾನವನಕ್ಕೆ 6 ಲಕ್ಷ ರೂ. ವೆಚ್ಚದಲ್ಲಿ ಯೋಗ ಮಂಟಪ ಮತ್ತು ಬಿಸಿಎಂ ಹಾಸ್ಟೆಲ್ ಕಡೆಗೆ ಹೋಗುವ ಕಾಲುವೆಯ ಎರಡು ಬದಿಗೆ ಮಕ್ಕಳ ಸುರಕ್ಷತೆ ದೃಷ್ಟಿಯಿಂದ ತಡೆಗೋಡೆ, ಪಾರ್ಕ್ ಪಕ್ಕದ ರಸ್ತೆ ಅಭಿವೃದ್ಧಿ, ಬಿಸಿಎಂ ಹಾಸ್ಟೆಲ್ ಪಕ್ಕದಲ್ಲಿ ಚರಂಡಿ ನಿರ್ಮಾಣ ಸೇರಿ 1 ಕೋಟಿ ರೂ. ವೆಚ್ಚದ ಕಾಮಗಾರಿಗೆ ಚಾಲನೆ ನೀಡಲಾಗಿದೆ. ವಾಯು ವಿಹಾರಕ್ಕೆ ತೆರಳುವ ನಾಗರಿಕರ ಬೇಡಿಕೆಯಂತೆ ಪಾರ್ಕ್ ಅಭಿವೃದ್ಧಿಗೆ ಆದ್ಯತೆ ನೀಡಿ ಸದ್ಯ ಒಂದು ಯೋಗ ಮಂಟಪ ನಿರ್ಮಾಣ ಮಾಡಲಾಗುವುದು. ಶೀಘ್ರ ಇನ್ನೊಂದು ಪಾರ್ಕ್‌ನಲ್ಲಿ ಯೋಗ ಮಂಟಪಕ್ಕೆ ಅವಕಾಶ ಮಾಡಿಕೊಡಲಾಗುವುದು ಎಂದರು.

ಕಾಲುವೆ ಪಕ್ಕದಲ್ಲಿ ಹಾದುಹೋಗುವ ರಸ್ತೆ ನಾಗಸಮುದ್ರ ಗ್ರಾಮಕ್ಕೆ ಸಂಪರ್ಕ ಕಲ್ಪಿಸಲಿದ್ದು, ಜಲ್ಲಿ ರಸ್ತೆ ನಿರ್ಮಾಣ ಮಾಡಲಾಗುವುದು. ಅನುದಾನ ಲಭ್ಯತೆ ಆಧರಿಸಿ ಕ್ರಾಂಕ್ರೀಟ್ ರಸ್ತೆಯನ್ನಾಗಿಸಲಾಗುವುದು ಎಂದ ಅವರು, ಬಿಸಿಎಂ ಹಾಸ್ಟೆಲ್‌ನಲ್ಲಿ 550 ಮಕ್ಕಳು ಆಶ್ರಯ ಪಡೆದಿದ್ದು, ಅವರ ನಿತ್ಯ ಕಾಲುವೆ ಪಕ್ಕದ ಹಾದಿಯಲ್ಲೇ ಸಾಗಬೇಕಿರುವುದರಿಂದ ಅವರು ಸುರಕ್ಷತೆ ದೃಷ್ಟಿಯಿಂದ ಕಾಲುವೆ ಎರಡುಬದಿ ತಡೆಗೋಡೆ ನಿರ್ಮಾಣ ಮತ್ತು ಹಾಸ್ಟೆಲ್ ಶಿಥಿಲವಾಗದ ರೀತಿ ಚರಂಡಿ ನಿರ್ಮಾಣ ಮಾಡಲಾಗುವುದೆಂದರು.

ನಗರದ ಸ್ವಚ್ಛತೆ ಸಲುವಾಗಿ ಪಟ್ಟಣದಲ್ಲಿ ಕಸ ಸುರಿಯದಂತೆ ಎಚ್ಚರಿಕೆ ನೀಡಲಾಗಿದೆ. ಇದರಿಂದ ಶೇ. 50 ಕಸ ಸುರಿಯುವುದು ಹತೋಟಿಗೆ ಬಂದಿದ್ದು, ಸಂಪೂರ್ಣ ನಿಲ್ಲಿಸುವ ಸಂಬಂಧ ಪುರಸಭಾ ಅಧ್ಯಕ್ಷರು, ಮುಖ್ಯಾಧಿಕಾರಿಗಳು ಕಾರ್ಯಪ್ರವೃತರಾಗಬೇಕೆಂದರು.

ಪುರಸಭಾಧ್ಯಕ್ಷ ಸಿ.ಎನ್. ಮೋಹನ್ ಮಾತನಾಡಿ, ಕಸ ಸುರಿಯುವವರಿಗೆ ದಂಡದ ಎಚ್ಚರಿಕೆ ನೀಡಿರುವುದರಿಂದ ಕಸ ಸುರಿಯುವುದು ಹತೋಟಿಗೆ ಬಂದಿದೆ. ಹೇಮಾವತಿ ಕಾಲುವೆ ಬಳಿ ಸುರಿಯುವವರ ಪತ್ತೆಗಾಗಿ ಶೀಘ್ರ ಸೋಲಾರ್ ಸಿಸಿ ಕ್ಯಾಮೆರಾ ಅಳವಡಿಕೆ ಮಾಡಲಾಗುವುದೆಂದರು.

ಪುರಸಭೆ ಉಪಾಧ್ಯಕ್ಷೆ ರಾಣಿ ಕೃಷ್ಣ, ಸ್ಥಾಯಿ ಸಮಿತಿ ಅಧ್ಯಕ್ಷ ಗಣೇಶ್, ಟಿಎಪಿಸಿಎಂಎಸ್ ಅಧ್ಯಕ್ಷ ಅನಿಲ್‌ಕುಮಾರ್, ಹೆಚ್‌ಎಸ್‌ಎಸ್‌ಕೆ ಅಧ್ಯಕ್ಷ ಸಿ.ಎನ್. ವೆಂಕಟೇಶ್, ಪುರಸಭಾ ಸದಸ್ಯ ನವೀನ್, ಮುಖಂಡರಾದ ಪರಮ ಕೃಷ್ಣೇಗೌಡ, ರಘುಶಾಮಿ, ಪುಟ್ಟರಾಜು, ಉಮೇಶ್, ಕಾವೇರಿ ನೀರಾವರಿ ನಿಗಮದ ಎಇಇ ದೀಪು ಇತರರು ಇದ್ದರು.

# ಅರಕಲಗೂಡಿನಲ್ಲಿ ಇಂದು ಪ್ರತಿಭಟನೆ




ಅರಕಲಗೂಡು: ತಾಲ್ಲೂಕಿನಲ್ಲಿ ಕಳಪೆ ಗುಣಮಟ್ಟದ ಬಿತ್ತನೆ ಬೀಜ, ಕೀಟನಾಶಕ ಹಾಗೂ ರಸಗೊಬ್ಬರ ಮಾರಾಟದ ವಿರುದ್ಧ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿ ಜೂ. 27 ರಂದು ಪಟ್ಟಣ ಹಾಗೂ ಜುಲೈ 7 ರಂದು ಹಾಸನದ ಜಂಟಿ ಕೃಷಿ ನಿರ್ದೇಶಕರ ಕಚೇರಿ ಮುಂದೆ ಪ್ರತಿಭಟನೆ ನಡೆಸಲಾಗುವುದು ಎಂದು ತಾಲ್ಲೂಕು ರೈತ ಸಂಘದ ಕಾರ್ಯಾಧ್ಯಕ್ಷ ಭುವನೇಶ್ ತಿಳಿಸಿದರು.

ಜಿಲ್ಲಾದ್ಯಂತ ರೈತರು ಬಿತ್ತನೆ ಮಾಡಿರುವ ಮುಸುಕಿನ ಜೋಳ ರೋಗ ಬಾಧೆಗೆ ತುತ್ತಾಗಿ ರೈತರು ತೀವ್ರ ಸಂಕಷ್ಟಕ್ಕೆ ಗುರಿಯಾಗಿದ್ದು ಇದಕ್ಕೆ ಕಳಪೆ ಗುಣಮಟ್ಟದ ಬಿತ್ತನೆ ಬೀಜ ಕಾರಣವಾಗಿದೆ ಎಂದು ಸುದ್ದಿಗೋಷ್ಟಿಯಲ್ಲಿ ಹೇಳಿದರು.

ಮುಂಗಾರು ಆರಂಭಕ್ಕೆ ಮುನ್ನ ಜಿಲ್ಲಾ ಜಂಟಿ ಕೃಷಿ ನಿರ್ದೇಶಕರು ರೈತರ ಸಭೆ ನಡೆಸಿ ಕಳಪೆ ಬಿತ್ತನೆ ಬೀಜ, ಕೀಟನಾಶಕ ಹಾಗೂ ರಸಗೊಬ್ಬರ ಮಾರಾಟ ಕುರಿತು ಕ್ರಮ ಕೈಗೊಳ್ಳುವ ಭರವಸೆ ನೀಡಿದ್ದರು. ಆದರೆ ಯಾವುದೇ ಕ್ರಮ ಕೈಗೊಂಡಿಲ್ಲ. ರೈತರಿಗೆ ಸೂಕ್ತ ಸಲಹೆ ನೀಡದ ಕಾರಣ ರೈತರು ಕಳಪೆ ಗುಣಮಟ್ಟದ ಬಿತ್ತನೆ ಬೀಜ ಬಿತ್ತನೆ ನಡೆಸಿ ನಷ್ಟಕ್ಕೆ ಒಳಗಾಗುವಂತಾಗಿದೆ. ತಾಲ್ಲೂಕಿನಲ್ಲಿ ತಂಬಾಕು ಬಿತ್ತನೆ ವೇಳೆ ಅತಿವೃಷ್ಟಿಯಿಂದಾಗಿ ನಾಟಿ ಮಾಡಿದ್ದ ತಂಬಾಕು ಸಸಿಗಳು ಕೊಳೆತು ಹೋಗಿ ನಷ್ಟವಾಗಿದೆ. ರೈತರಿಗೆ ಸೂಕ್ತ ಪರಿಹಾರ ದೊರಕಿಸಬೇಕು ಹಾಗೂ ಕಳಪೆ ಮಾರಾಟ ತಡೆಗಟ್ಟಲು ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿ ಶುಕ್ರವಾರ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ. ಪ್ರವಾಸಿ ಮಂದಿರದ ಆವರಣದಿಂದ ಕೃಷಿ ಇಲಾಖೆ ಕಚೇರಿ ವರೆಗೆ ಮೆರವಣಿಗೆಯಲ್ಲಿ ತೆರಳಿ ಬಳಿಕ ಕಚೇರಿ ಮುಂದೆ ಪ್ರತಿಭಟನೆ ನಡೆಸುವುದಾಗಿ ಹೇಳಿದರು.

# ಹಾರ್ಡ್ ಹಿಟ್ಟಿಂಗ್ ಸಿನಿಮಾ ಇದು!




ಮನದಹಾದಿ

ಚಿತ್ರ: ರೋನ್ತ್, ಭಾಷೆ: ಮಲೆಯಾಳಂ 2025
(ಚಿತ್ರ ಮಂದಿರ)
-ಪ್ರಶಾಂತ್ ಭಟ್

ಕೆಲವು ಸಿನಿಮಾಗಳು ನೋಡಿದ ಬಹಳ ಕಾಲದ ನಂತರವೂ ಮನಸಲ್ಲಿ ಉಳಿದು ಆಗಾಗ ನೆನಪಾಗಿ ಹಿಂಸಿಸುತ್ತವೆ. ಫೆಭಿಕ್ಲಿಜ್ಡ್ ಅಲ್ಲಿರುವ ಚಿಢಚಿರಿಕ್ರಿ ಫೆಭಿಕ್ಲಿಜ್ಡ್ ಸಿನಿಮಾಗಳಲ್ಲೊಂದು. ಅದರ ಚಿತ್ರಕಥೆ ಬರೆದ 'ela virinza poonchira' ಎಂಬ ಪ್ರಚಂಡ ಸಿನಿಮಾದ ನಿರ್ದೇಶಕ ಶಾಹಿನ್ ಸಿನಿಮಾ ಇದು ಅನ್ನುವಾಗಲೇ ಮನಸು ಗಟ್ಟಿ ಮಾಡಿಕೊಂಡಿದ್ದೆ.

ಅದಲ್ಲದೆ ದಿಲೀಶ್ ಪೋತನ್ ಮತ್ತು ರೋಶನ್ ಬೇರೆ. ಅವರಿಬ್ಬರ ಅಭಿನಯ ಸಾಮರ್ಥ್ಯದ ಬಗ್ಗೆ ಹೊಸದಾಗಿ ಹೇಳಬೇಕಾಗಿ ಏನಿಲ್ಲ. ಅದರಲ್ಲೂ ರೋಶನ್ ಇತ್ತೀಚೆಗೆ ಹಿಂದಿ ವೆಬ್ ಸರಣಿ kankhajura ದಲ್ಲೂ ಮಿಂಚಿದವ.

ಬಹುಶಃ action hero Biju ನಂತರ ಹೀಗೆ ಪೋಲಿಸರ ಚಟುವಟಿಕೆ ಬಗ್ಗೆ ಸಿನಿಮಾ ಬಂದದ್ದು.ಅದು ಲೈಟ್ ಆಗಿ ತಗೊಂಡು ಹೋದರೆ ಇದು ಹಾರ್ಡ್ ಹಿಟ್ಟಿಂಗ್. ರಾತ್ರಿ ಪ್ಯಾಟ್ರೋಲಿಂಗ್ ಡ್ಯೂಟಿ ಮಾಡುವ ಇಬ್ಬರು ಪೋಲಿಸರು. ಅವರಿಬ್ಬರಿಗೂ ಅವರದೇ ಕಾಡುವ ಕಣ್ಣೀರು ಉಕ್ಕಿಸುವ ಗತವಿದೆ. ಅನಿವಾರ್ಯತೆ ಇದೆ. ಸಹಾಯ ಮಾಡುವ ಒಳ್ಳೆಯ ಮನಸೂ, ಅಗತ್ಯ ಬಿದ್ದಾಗ ಕಠಿಣವಾಗುವ ಮನಸ್ಥಿತಿಯೂ.. ಹಾಗೆ ಅವರ ರಾತ್ರಿ ಬೀಟ್‌ನಲ್ಲಿ ಎದುರಾಗುವ ಸನ್ನಿವೇಶಗಳ ನಿಭಾಯಿಸುವ ರೀತಿ, ಒಂದು ಊಹಿಸಲಾಗದ ಅನಿವಾರ್ಯ ಘಟನೆ ಇವುಗಳ ಸುತ್ತ ಕತೆ ಸುತ್ತುತ್ತದೆ. ಅತ್ಯಂತ ರಿಯಲಿಸ್ಟಿಕ್ ಚಿತ್ರಣ.

ನಾವೆಲ್ಲ ಆಗಿದ್ದರೆ ವರ್ಷಾನುಗಟ್ಟಲೆ ಟ್ರಾಮಾ ಎದುರಿಸಬೇಕಾದ ಘಟನೆಗಳು ಪೋಲಿಸರಿಗೆ ನಿತ್ಯ ಕಾಣಸಿಗುವುದನ್ನು ತೋರಿಸಿದ ರೀತಿ ನಿರ್ದೇಶಕ ಏನು ಹೇಳಬೇಕೋ ಅದನ್ನು ಚೆನ್ನಾಗಿ ದಾಟಿಸುತ್ತಾನೆ. ಬಹಳ ಕಾಲ ಕಾಡುವ ಸಿನಿಮಾ. ಮತ್ತೆ ನೋಡಲು ಸಾಧ್ಯವೇ ಇಲ್ಲದ ಸಿನಿಮಾ. - ರೇಟಿಂಗ್ 9/10

# ಇತಿಹಾಸದಲ್ಲಿ ಈ ದಿನ

## ಜೂನ್-27

1954: ಗ್ವಾಟೆಮಾಲಾದಲ್ಲಿ ಅಮೇರಿಕಾದ ಸಿಐಎ ಬೆಂಬಲದ ದಾಳಿ ನಡೆಯಿತು ಮತ್ತು ಅಧ್ಯಕ್ಷ ಜಾಕೊಬೋ ಅರ್ಬೆನ್ಸ್ ಅವರನ್ನು ಪದಚ್ಯುತಗೊಳಿಸಲಾಯಿತು.

1977: ಜಿಬೋತಿ ದೇಶವು ಫ್ರಾನ್ಸ್‌ನಿಂದ ಸ್ವಾತಂತ್ರ್ಯ ಪಡೆಯಿತು.

2005: ಮೈಕ್ರೋಸಾಫ್ಟ್ ಕಂಪನಿಯ ಬಿಲ್ ಗೇಟ್ಸ್ ಜಗತ್ತಿನ ಶ್ರೀಮಂತ ವ್ಯಕ್ತಿಗಳ ಪಟ್ಟಿಯಲ್ಲಿ ಮೊದಲ ಸ್ಥಾನ ಪಡೆದರು.

**ಜನನ**

1838: ಬಂಕಿಂಚಂದ್ರ ಚಟರ್ಜಿ: ಬಂಗಾಳಿ ಕವಿ ಮತ್ತು ಲೇಖಕ. ವಂದೇ ಮಾತರಂ ರಾಷ್ಟ್ರಗೀತೆ ರಚನೆಕಾರ.

1880: ಹ್ಯಾಲೆ ಲೂಕ್: ಶ್ರವಣ ಮತ್ತು ದೃಷ್ಟಿಹೀನ, ಲೇಖಕಿ.

1970: ರಾಹುಲ್ ರಾಯ್: ಬಾಲಿವುಡ್ ನಟ, ಆಶಿಕಿ ಚಿತ್ರದಿಂದ ಖ್ಯಾತಿ ಪಡೆದವರು.

1968: ಪಿಲಾವುಳಿ ಕೃಷ್ಣ ಪಿಷಾರೊಡಿ: ಪ್ರಸಿದ್ಧ ಮಾಲೆಯಾಳಂ ಲೇಖಕ, ಕವಿ ಮತ್ತು ನಿರೂಪಕ.

1966: ವಿಜಯ ಶಾಂತಿ: ದಕ್ಷಿಣ ಭಾರತದ ಖ್ಯಾತ ನಟಿ ಮತ್ತು ರಾಜಕಾರಣಿ.

**ಮರಣ**

1839: ರಂಜಿತ್ ಸಿಂಗ್: ಸಿಖ್ ಸಾಮ್ರಾಜ್ಯದ ಸಂಸ್ಥಾಪಕ ಮತ್ತು ಪ್ರಭುತ್ವ ಶಕ್ತಿಶಾಲಿಯಾದ ದೊರೆ.

1960: ಲಾಲ್‌ಬಹದ್ದೂರ್ ಶಾಸ್ತ್ರಿ: ಭಾರತದ ಎರಡನೇ ಪ್ರಧಾನಮಂತ್ರಿ.

1957: ಸಪರು ಗಂಗಾಧರ್ ಭುಜಬಳೇ: ಮುಂಬೈ ಪ್ರಾಂತ್ಯದ ಮೊದಲ ಮುಖ್ಯಮಂತ್ರಿ.

# ಶಕ್ತಿ ಯೋಜನೆಗೆ ಬಸ್ ನಿರ್ವಾಹಕರ ಅಸಡ್ಡೆ

## ವರ್ತನೆ ಬದಲಸಿಕೊಳ್ಳದಿದ್ದರೆ ಕ್ರಮ | ಪುಷ್ಪಾ ಅಮರನಾಥ್ ಎಚ್ಚರಿಕೆ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್




ಅರಕಲಗೂಡು: ಶಕ್ತಿ ಯೋಜನೆಯಡಿ ರಾಜ್ಯದ ಎಲ್ಲಾ ಮಹಿಳೆಯರಿಗೆ ಕೆಎಸ್‌ಆರ್‌ಟಿಸಿ ಬಸ್‌ಗಳಲ್ಲಿ ಉಚಿತ ಪ್ರಯಾಣ ವ್ಯವಸ್ಥೆ ಕಲ್ಪಿಸಿದ್ದು ಕೆಲವು ಕಡೆ ಬಸ್ ನಿರ್ವಾಹಕರು ಪ್ರಯಾಣಿಕರೊಂದಿಗೆ ಅಸಭ್ಯವಾಗಿ ವರ್ತಿಸುತ್ತಿರುವ ದೂರು ಕೇಳಿಬಂದಿದೆ. ವರ್ತನೆಯಲ್ಲಿ ಬದಲಾವಣೆ ಮಾಡಿಕೊಳ್ಳದಿದ್ದರೆ ಪರಿಣಾಮ ಎದುರಿಸಬೇಕಾಗುತ್ತದೆ ಎಂದು ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಮೈಸೂರು ವಿಭಾಗ ಉಪಾಧ್ಯಕ್ಷೆ ಪುಷ್ಪಾ ಅಮರನಾಥ್ ಎಚ್ಚರಿಕೆ ನೀಡಿದರು.

ತಾಲ್ಲೂಕು ಪಂಚಾಯಿತಿ ಸಭಾಂಗಣದಲ್ಲಿ ಬುಧವಾರ ಹಮ್ಮಿಕೊಂಡಿದ್ದ ಗ್ಯಾರಂಟಿ ಯೋಜನೆಗಳ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿ, ಹಲವು ಕಡೆ ಬಸ್‌ನಲ್ಲಿ ಪ್ರಯಾಣಿಸುವವರ ವೈಯಕ್ತಿಕ ಕಾರಣದಿಂದ ಸಣ್ಣಪುಟ್ಟ ಸಮಸ್ಯೆ ಕಂಡುಬಂದಿದೆ. ಆದರೆ ಬಹುತೇಕ ಕಡೆ ಬಸ್‌ನ ನಿರ್ವಾಹಕರಿಂದ ಪ್ರಯಾಣಿಕರಿಗೆ ಉದ್ದೇಶಪೂರ್ವಕವಾಗಿ ತೊಂದರೆ ಉಂಟುಮಾಡುತ್ತಿರುವುದು ಕಂಡುಬಂದಿದೆ. ಅವರ ಕುಟುಂಬದವರು, ಮಕ್ಕಳು, ಮಹಿಳೆಯರು ಶಕ್ತಿ ಯೋಜನೆಯ ಪ್ರಯೋಜನ ಪಡೆಯುತ್ತಿದ್ದಾರೆ. ಎಂತಹುದೇ ಸಂದರ್ಭ ಎದುರಾದರೂ ಕೂಡ ಪ್ರಯಾಣಿಕ ಮಹಿಳೆಯರು, ಶಾಲಾ ಕಾಲೇಜುಗಳಿಗೆ ತೆರಳುವ ವಿದ್ಯಾರ್ಥಿನಿಯರೊಡನೆ ಸೌಜನ್ಯವಾಗಿ ವರ್ತಿಸಿ ಬಸ್‌ನಲ್ಲಿ ಪ್ರಯಾಣಿಸಲು ಅವಕಾಶ ಮಾಡಿಕೊಡಬೇಕೆಂದು ವಿಭಾಗೀಯ ನಿಯಂತ್ರಣಾಧಿಕಾರಿ, ಬಸ್ ಘಟಕಗಳ ವ್ಯವಸ್ಥಾಪಕರಿಗೆ ಸೂಚನೆ ನೀಡಿದರು.

### ಇಂದಿರಾ ಆಹಾರ ಕಿಟ್ ವಿತರಣೆ

ಪಡಿತರದಾರರಿಗೆ ನ್ಯಾಯಬೆಲೆ ಅಂಗಡಿ ಮೂಲಕ ಇಂದಿರಾ ಆಹಾರ ಕಿಟ್ ವ್ಯವಸ್ಥೆಯನ್ನು ಜಾರಿಗೆ ತರಲು ಉದ್ದೇಶಿಸಿದೆ. ವ್ಯವಸ್ಥೆ ಜಾರಿಗೆ ಬಂದಮೇಲೆ ಪ್ರತಿ ಪಡಿತರದಾರರಿಗೆ 5 ಕೆ.ಜಿ. ಅಕ್ಕಿಯೊಂದಿಗೆ ಅಗತ್ಯ ಆಹಾರ ಪದಾರ್ಥಗಳಾದ ಸಕ್ಕರೆ, ಅಡುಗೆ ಎಣ್ಣೆ, ಗೋಧಿ, ಬೇಳೆ, ಕಾಫಿ ಪುಡಿ, ಟೀ ಪುಡಿ ಒಳಗೊಂಡ ಕಿಟ್ ಪ್ರತಿ ಕಾರ್ಡ್‌ದಾರರಿಗೆ ದೊರೆಯಲಿದೆ ಎಂದು ಹೇಳಿದರು.

### ಕುಟುಂಬಗಳಿಗೆ ಲಕ್ಷಾಂತರ ರೂ.

ನಮ್ಮ ಸರ್ಕಾರ ಜಾರಿಗೆ ತಂದಿರುವ ಪಂಚ ಗ್ಯಾರಂಟಿಗಳಿಂದ ಪ್ರತಿ ಮಹಿಳೆಯರು, ಕುಟುಂಬವರಿಗೆ 5 ವರ್ಷಗಳ ಅವಧಿಯಲ್ಲಿ ಅಂದಾಜು ಮೂರು ಲಕ್ಷ ರೂ. ಆರ್ಥಿಕ ನೆರವು ದೊರೆತಂತಾಗುತ್ತದೆ. ಇದರಿಂದ ಸಮಾನತೆಯನ್ನು ಎಲ್ಲರೊಂದಿಗೂ ಕಾಣಬಹುದಾಗಿದೆ. ಜನ ಸಾಮಾನ್ಯರ ಆರ್ಥಿಕ ಸಬಲೀಕರಣ ಮತ್ತು ಮಹಿಳೆಯರ ಸ್ವಾವಲಂಬಿ ಬದುಕಿಗೆ ನೆರವಾಗಿದೆ ಎಂದು ಅವರು ತಿಳಿಸಿದರು.

ರಾಜ್ಯ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪಟ್ಟಿಯಲ್ಲಿ ಅರಕಲಗೂಡು ತಾಲ್ಲೂಕು ಐದರೊಳಗಿನ ಸ್ಥಾನದಲ್ಲಿದೆ. ಗೃಹಲಕ್ಷ್ಮೀ ಶೇ.99.45., ಶಕ್ತಿ ಯೋಜನೆ ಶೇ. 99.50, ಗೃಹಜ್ಯೋತಿ ಶೇ. 99.82, ಅನ್ನಭಾಗ್ಯ ಶೇ.98.14 ಮತ್ತು ಯುವನಿಧಿ ಶೇ.21.39ರಷ್ಟು ಸಾಧನೆಯಾಗಿದ್ದು ಇದು ಹಾಸನ ಜಿಲ್ಲೆ ಮಟ್ಟದಲ್ಲಿ ಶೇ.99.80 ಸಾಧನೆ ಮಾಡಿ ಪ್ರಥಮ ಸ್ಥಾನದಲ್ಲಿದೆ ಎಂದರು.

### ಪ್ರಚಾರ ಫಲಕ ಅಳವಡಿಸಿ

ಸಾರ್ವಜನಿಕ ಸ್ಥಳಗಳಲ್ಲಿ ಪಂಚ ಗ್ಯಾರಂಟಿ ಯೋಜನೆಗಳ ನಾಮಫಲಕಗಳು ಎಲ್ಲಿಯೂ ಕಂಡುಬಂದಿಲ್ಲ. ಪ್ರಮುಖವಾಗಿ ತಹಸೀಲ್ದಾರ್ ಕಚೇರಿ, ತಾಲ್ಲೂಕು ಪಂಚಾಯಿತಿ ಆವರಣ, ಬಸ್ ನಿಲ್ದಾಣ, ಸಿಡಿಪಿಒ ಕಚೇರಿ ಮತ್ತು ವಿದ್ಯುತ್ ಇಲಾಖೆ ಬಳಿ ಹಾಕಿಲ್ಲ. ಬೆರಳೆಣಿಕೆ ಜನರನ್ನು ಹೊರತುಪಡಿಸಿದರೇ ಶೇ.99ರಷ್ಟು ಮಂದಿ ಫಲಾನುಭವಿಗಳಾಗಿದ್ದಾರೆ. ಸರ್ಕಾರದ ಭಾಗವಾಗಿರುವ ಅಧಿಕಾರಿಗಳು ನಾಮಫಲಕ ಹಾಕುವ ಕೆಲಸವನ್ನು ಕಡ್ಡಾಯವಾಗಿ ಮಾಡಬೇಕು. ಮುಂದಿನ ದಿನಗಳಲ್ಲಿ ಭೇಟಿನೀಡುವ ವೇಳೆ ಎಲ್ಲಾ ಕಚೇರಿ ಬಳಿ ಗ್ಯಾರಂಟಿ ಯೋಜನೆಗಳ ನಾಮಫಲಕ ಇರಬೇಕೆಂದು ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ಕೊಟ್ಟರು.

### ಯುವನಿಧಿಗೆ ಹಿನ್ನಡೆ

ಜಿಲ್ಲೆಯ ಎಲ್ಲಾ ತಾಲ್ಲೂಕುಗಳಲ್ಲಿ ತಾಂತ್ರಿಕ ಶಿಕ್ಷಣ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿವೆ. ನಮ್ಮಲ್ಲಿ ಕೇವಲ ಎರಡು ಪದವಿ ಕಾಲೇಜುಗಳನ್ನು ಹೊರತುಪಡಿಸಿದರೇ ಉನ್ನತ ಶಿಕ್ಷಣ ಸಂಸ್ಥೆಗಳು ಇಲ್ಲ. ಇದರಿಂದ ನಿತ್ಯವೂ ನಮ್ಮ ತಾಲೂಕಿನಿಂದ ಸಾವಿರಾರು ಮಂದಿ ವಿದ್ಯಾರ್ಥಿಗಳು ದೂರದ ಊರುಗಳಿಗೆ ತೆರಳಿ ಶಿಕ್ಷಣ ಪಡೆಯುವಂತಹ ನೋವಿನ ಪರಿಸ್ಥಿತಿ ಉಂಟಾಗಿದೆ. ಸಾಮಾನ್ಯ ಪದವಿ ಪಡೆಯುವವರ ಸಂಖ್ಯೆ ಹೆಚ್ಚಿದೆ. ತಾಂತ್ರಿಕ ಶಿಕ್ಷಣ ಪಡೆಯುವವರ ಸಂಖ್ಯೆ ಅತೀ ಕಡಿಮೆ. ಈ ಸಲುವಾಗಿ ತಾಲ್ಲೂಕಿನಲ್ಲಿ ಯುವನಿಧಿ ಪ್ರಯೋಜನ ಪಡೆಯುವವರ ಸಂಖ್ಯೆ ಕೇವಲ 700 ಮಂದಿ ಇದ್ದಾರೆ ಎಂದು ತಾಲ್ಲೂಕು ಗ್ಯಾರಂಟಿ ಯೋಜನೆ ಸಮಿತಿ ಅಧ್ಯಕ್ಷ ಹೆಚ್.ಪಿ. ಶ್ರೀಧರ್‌ಗೌಡ ತಿಳಿಸಿದರು.

ತಹಶೀಲ್ದಾರ್ ಸೌಮ್ಯ, ತಾಪಂ ಇಒ ಶ್ರೀನಿವಾಸ್, ಸಮಿತಿ ಸದಸ್ಯರಾದ ರಾಜೇಶ್, ವಿವಿಧ ಇಲಾಖೆ ಅಧಿಕಾರಿಗಳು ಹಾಜರಿದ್ದರು.

# ದೇಶದಲ್ಲಿ 7.5 ಕೋಟಿ ಮದ್ಯ ವ್ಯಸನಿಗಳು

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಆಲೂರು: ದೇಶದಲ್ಲಿ ಸುಮಾರು 7.5 ಕೋಟಿ ಯುವಕರು ಮಾದಕ ವ್ಯಸನಿಗಳಾಗಿದ್ದಾರೆ. ಪ್ರತಿದಿನ ಹತ್ತು ಜನರು ಮಾದಕ ದ್ರವ್ಯ ವ್ಯಸನಿಗಳು ಆತ್ಮಹತ್ಯೆಗೆ ಶರಣಾಗುತ್ತಿದ್ದಾರೆ ಎಂದು ಪೊಲೀಸ್ ಇನ್ಸ್‌ಪೆಕ್ಟರ್ ಮೋಹನರೆಡ್ಡಿ ಆತಂಕ ವ್ಯಕ್ತಪಡಿಸಿದರು.

ಪಟ್ಟಣದ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಜಿಲ್ಲಾ ಪೊಲೀಸ್ ಸಕಲೇಶಪುರ ಉಪ ವಿಭಾಗ, ಆಲೂರು ಪೊಲೀಸ್ ಠಾಣೆ, ತಾಲ್ಲೂಕು ಆರೋಗ್ಯ ಇಲಾಖೆ ಮತ್ತು ಕಾಲೇಜು ರಾಷ್ಟ್ರೀಯ ಸೇವಾ ಯೋಜನ ಘಟಕ ಸಂಯುಕ್ತಾಶ್ರಯದಲ್ಲಿ ಏರ್ಪಡಿಸಿದ್ದ ಅಂತರಾಷ್ಟ್ರೀಯ ಮಾದಕ ದ್ರವ್ಯ ವಿರೋಧಿ ದಿನಾಚರಣೆ ಉದ್ಘಾಟಿಸಿ ಮಾತನಾಡಿದರು.

ಯುವಜನರು ಸಹವಾಸ ದೋಷದಿಂದ ವ್ಯಸನಿಗಳಾಗುತ್ತಿರುವುದು ದುರದೃಷ್ಟಕರ. ಇಂತಹ ಪ್ರಕರಣಗಳು ದಿನದಿಂದ ದಿನಕ್ಕೆ ಹೆಚ್ಚಾಗುತ್ತಿವೆ.




ಗಾಂಜಾ, ಅಫೀಮು, ಕೊಕೇನ್, ಚರಾಸ್, ಬ್ರೌನ್‌ಶುಗರ್ ಸೇವಿಸುವವರು. ಬಡತನ ರೇಖೆ ಕೆಳಗಿರುವ ಚಿಂದಿ ಆಯುವ ಮಕ್ಕಳು ಸಹ ಟೈರ್ ಪಂಕ್ಚರ್‌ಗೆ ಬಳಸುವ ಸೆಲ್ಯೂಷನ್, ವೈಟನರ್ ಬಳಸುವುದರೊಂದಿಗೆ ವ್ಯಸನಿಗಳಾಗುತ್ತಿದ್ದಾರೆ. ಇವರು ಕೆಲ ಸಂದರ್ಭಗಳಲ್ಲಿ ಅಪರಾಧ ಎಸಗುತ್ತಿದ್ದಾರೆ. ತಮ್ಮೊಂದಿಗೆ ತಮ್ಮ ಕುಟುಂಬವನ್ನೇ ನಾಶ ಮಾಡುತ್ತಾರೆ. ಮಾದಕ ದ್ರವ್ಯಗಳನ್ನು ಬೆಳೆಸುವುದು, ಮಾರಾಟ ಮಾಡುವುದು, ಸಾಗಿಸುವುದನ್ನು ನಿಷೇಧಿಸಿ 1985ರಲ್ಲಿ ಕಾನೂನು ಜಾರಿಗೆ ತರಲಾಗಿದೆ. ಪ್ರಕರಣಕ್ಕೊಳಗಾದವರಿಗೆ ಶಿಕ್ಷೆ ವಿಧಿಸಲಾಗುತ್ತದೆ. ಯುವ ಜನರು ವ್ಯಸನಿಗಳಾಗದೆ ಸದೃಢವಾದ ಆರೋಗ್ಯವಂತ ದೇಶ ನಿರ್ಮಾಣ ಮಾಡಲು ಪಣ ತೊಡಬೇಕು ಎಂದರು.

ತಾಲ್ಲೂಕು ಆರೋಗ್ಯಾಧಿಕಾರಿ ಡಾ. ನಿಸಾರ್ ಫಾತಿಮ ಮಾತನಾಡಿ, ಇತ್ತೀಚಿನ ದಿನಗಳಲ್ಲಿ ವ್ಯಸನಕ್ಕೆ ಬಲಿಯಾದ ಯುವತಿಯರು ಅನೈತಿಕ ಸಂಬಂಧಕ್ಕೆ ಸಿಲುಕಿ ಗರ್ಭಿಣಿಯಾಗುತ್ತಿರುವುದನ್ನು ಗಮನಸಿದರೆ, ಯುವಜನರು ಎತ್ತ ಸಾಗುತ್ತಿದ್ದಾರೆ ಎಂಬ ಆತಂಕ ಮೂಡುತ್ತಿದೆ. ಅದರಿಂದ ಅನೇಕ ಕುಟುಂಬಗಳು ನಾಶವಾಗುತ್ತಿವೆ. ವ್ಯಸನಿಗಳು ಎಂತಹ ದುಷ್ಕೃತ್ಯ ಮಾಡಲು ಸಹ ಹಿಂಜರಿಯುವುದಿಲ್ಲ. ದಾರಿ ತಪ್ಪಿದ ಯುವಜನರು ತಮ್ಮ ಅಂತ್ಯವನ್ನು ತಂದುಕೊಳ್ಳುತ್ತಿದ್ದಾರೆ. ಆದ್ದರಿಂದ ಯುವಜನರು ಸಾಧ್ಯವಾದಷ್ಟು ಸಜ್ಜನರ ಸಹವಾಸದೊಂದಿಗೆ ಉತ್ತಮ ಭವಿಷ್ಯ ರೂಪಿಸಿಕೊಳ್ಳಬೇಕು ಎಂದರು.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248